
1118


ಕರ್ನಾಟಕ ಕಲಾವಿದರ ಮಾಲೆ-19

ಎಸ್.ಎನ್. ಸ್ವಾಮಿ

1118



ಕರ್ನಾಟಕ ಲಲಿತಕಲಾ ಅಕಾಡೆಮಿ



ಎನ್. ಮರಿಶಾಮಾಚಾರ್

ನಾಡಿನ ಕಲಾರಂಗದಲ್ಲಿ ಎನ್. ಮರಿಶಾಮಾಚಾರ್ ಈಗಾಗಲೇ ಚಿರಪರಿಚಿತರು. ಚಿತ್ರ ಕಲಾವಿದರಾಗಿ, ಕಲಾ ಲೇಖಕರಾಗಿ ಹಾಗೂ ಸಮರ್ಥ ಸಂಘಟಕರಾಗಿ ಇರುವ ಈ ಬರಹಗಾರರು ಬಹುಮುಖ ಪ್ರತಿಭೆಯುಳ್ಳವರು.

ಬೆಂಗಳೂರಿನ ಕೆನ್ ಸ್ಕೂಲ್ ಆಫ್ ಆರ್ಟ್‌ನಿಂದ ಕಲಾ ಡಿಪ್ಲೋಮಾವನ್ನು ಪ್ರಥಮ ರ್‍ಯಾಂಕಿನಲ್ಲಿ ಮತ್ತು ಆರ್ಟ್ ಮಾಸ್ಟರ್‌ನಲ್ಲಿ ದ್ವಿತೀಯ ರ್‍ಯಾಂಕ್ ಪಡೆದಿರುವ ಮರಿಶಾಮಾಚಾರ್ ರಾಜ್ಯ ಲಲಿತಕಲಾ ಅಕಾಡೆಮಿಯ ವಿದ್ವಾಂಸ ವೇತನ ಪಡೆದು ಬರ್ಹೋಡದ ಫ್ಯಾಕಲ್ಟಿ ಆಫ್ ಫೈನ್ ಆರ್ಟ್‌ನಲ್ಲಿ ಕಲಾಭ್ಯಾಸವನ್ನು ಮಾಡಿದ್ದಾರೆ. ಹೆಸರಾಂತ ಚಿತ್ರಗಾರ 'ಕೆ. ಜಿ. ಸುಬ್ರಮಣ್ಯನ್' ಬಳಿ ಕಲಾಭ್ಯಾಸವನ್ನು ಮಾಡಿದ ಹಿರಿಮೆ ಇವರದು.

ಕನ್ನಡದಲ್ಲಿ ಕಲಾ ಸಾಹಿತ್ಯ ಬೆಳೆಯಲು ವಿಶೇಷವಾಗಿ ಶ್ರಮಿಸುತ್ತಿರುವ ಮರಿಶಾಮಾಚಾರ್ ಈಗಾಗಲೇ 'ಸಮಕಾಲೀನ ಕಲೆ', 'ಕೆ. ಕೆ. ಹೆಬ್ಬಾರ್', 'ಸೃಜನಶೀಲರು', 'ಕಲಾಕೋಶ', 'ಪ್ರೊ: ಕೆ. ಜಿ. ಸುಬ್ರಮಣ್ಯನ್', 'ಸಮಕಾಲೀನ ಕಲೆ', 'ಎಮ್. ಎಫ್. ಹುಸೇನ್', 'ಕಲಾಭಿವ್ಯಕ್ತಿ', 'ಭಾರತದಲ್ಲಿ ಸಮಕಾಲೀನ ಕಲೆ', 'ಕಲಾವಿದರು', 'ಸಾಹಿತ್ಯದಲ್ಲಿ ಚಿತ್ರಕಲೆ' ಮುಂತಾದ ಅನೇಕ ಗಮನಾರ್ಹ ಪುಸ್ತಕಗಳನ್ನು ನೀಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಬಹುಮಾನ ಪಡೆದಿರುವ ಮರಿಶಾಮಾಚಾರ್ ಅವರಿಗೆ ಲಭ್ಯವಾಗಿದೆ.

ಅಖಿಲ ಭಾರತ ಮತ್ತು ರಾಷ್ಟ್ರದ ಕಲಾ ಪ್ರದರ್ಶನದಲ್ಲಿ ಈ ಕಲಾವಿದರು ಭಾಗವಹಿಸಿ ತಮ್ಮ ಕಲಾ ಪ್ರತಿಭೆಯನ್ನು ನಾಡಿನ ಜನತೆಗೆ ಪರಿಣಾಮಕಾರಿಯಾಗಿ ಪರಿಚಯಿಸಿದ್ದಾರೆ. ಗ್ರಾಫಿಕ್ ಮಾಧ್ಯಮದಲ್ಲಿ ಚಿತ್ರ ರಚನೆ ಇವರಿಗೆ ಪ್ರಿಯವಾದ ಹವ್ಯಾಸಗಳಲ್ಲೊಂದು.

■ ಕರ್ನಾಟಕ ಕಲಾವಿದರ ಮಾಲೆ –19

ಎಸ್.ಎನ್. ಸ್ವಾಮಿ

ಎನ್. ಮರಿಶಾಮಾಚಾರ್

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-2

S.N.Swamy : A Biography by N.Marishamachar.
Published by the Karnataka Lalitkala Academy,
14/3, Nrupathunga Road, Bangalore - 560 002.

General Editor : H.N.Suresh

Cover page : Portrait of Mahatma Gandhi - S.N.Swamy


English Translation : H.V.Gayathri

Layout : C.S.Krishna Setty

First Impression : 1989. Copies : 1000

Price Rs.6.00


Printed at :
Brindavan Printers & Publishers Pvt. Ltd.
Bangalore 560 004.



ಎಸ್.ಎನ್.ಸ್ವಾಮಿ

ಜನನ : 1911 ನಿಧನ : 1983

ಅಧ್ಯಕ್ಷರ ನುಡಿ



ರೇಖಾಚಿತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ಹಿರಿಯ ಕಲಾವಿದ ಶ್ರೀ ಎಸ್. ಎನ್. ಸ್ವಾಮಿ ಇನರ ಕಲೆ ಮತ್ತು ಜೀವನ ಕುರಿತ ಈ ಕಿರು ಹೊತ್ತಿಗೆಯೊಂದನ್ನು ಕಲಾಭಿಮಾನಿಗಳಿಗೆ ಅರ್ಪಿಸಲು ಸಂತೋಷಿಸುತ್ತೇನೆ.

ಸಿಂಗಣ್ಣಚಾರ್ಯ ನರಸಿಂಹ ಸ್ವಾಮಿ ಮೈಸೂರಿನಲ್ಲಿ ಹುಟ್ಟಿಬೆಳೆದವರು. ಭಾವಚಿತ್ರ ರಚನೆಯಮೂಲಕ ವಿಶ್ವ ಪ್ರಖ್ಯಾತರಾದರು. ದೇಶ ವಿದೇಶಗಳಲ್ಲಿ ಸ್ವಾಮಿ ಅವರ ಕಲಾಕೃತಿ ಇಂದಿಗೂ ಮನೆ ಮಾತಾಗಿದೆ.

ಚಿತ್ರಕಾರ ಸ್ವಾಮಿಯವರ ಕಲಾ ಶಿಕ್ಷಣ ಸಾಧನೆ ಹಾಗೂ ನೆಹರೂ ಮನೆತನದವರೊಡನೆ ಸಂಪರ್ಕ ಮತ್ತು ವಿಶ್ವವಿಖ್ಯಾತ ಗಣ್ಯದ ರೇಖಾಚಿತ್ರಗಳ ರಚನೆ ಮುಂತಾದ ವಿಚಾರಗಳನ್ನು ಕುರುತು ಪ್ರಸ್ತುತ ಪುಸ್ತಕದಲ್ಲಿ ತರುಣ ಬರಹಗಾರರಾದ ಶ್ರೀ ಎನ್.ಮರಿಶಾಮಾಚಾರ್ ವಿಶ್ಲೇಷಿಸಿದ್ದಾರೆ. ಕಲೆ–ಕಲಾವಿದರ ಬಗ್ಗೆ ಸಮಗ್ರ ಚಿತ್ರಣ ನೀಡುವಲ್ಲಿ ಈ ಪುಸ್ತಕ ಸಾಕಷ್ಟು ಪ್ರಯತ್ನಿಸುತ್ತಿದೆ.

ಮೈಸೂರು ಅರಸರು ಕಲಾವಿದ ಸ್ವಾಮಿ ಅವರಿಗೆ ನೀಡಿದ ಪ್ರೋತ್ಸಾಹ, ಮುಂಬೈನಲ್ಲಿ ಸ್ವಾಮಿ ಅವರ ಕಲಾನುಭವ, ಚಿತ್ರಕಾರರು ಹೊರತಂದ ಕಲಾ ಪ್ರಕಟಣೆಗಳ ಪ್ರಸ್ತಾಪ ಹಾಗೂ ಕಲಾವಿದರ ವಿದೇಶಿ ಪ್ರವಾಸದ ಉಲ್ಲೇಖ ಎಲ್ಲವೂ ಈ ಪುಸ್ತಕದಲ್ಲಿ ವಿವರವಾಗಿ ಹೊರಬಂದಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿ ತನ್ನ ಪುಸ್ತಕ ಮಾಲೆಯಲ್ಲಿ ಚಿತ್ರಕಾರ ಸ್ವಾಮಿ ಅವರ ಕಲೆ ಜೀವನ ಕುರಿತ ಈ ಪುಸ್ತಕವೊಂದನ್ನು ಪ್ರಕಟಿಸುತ್ತಿರುವುದು ನನಗೆ ಸಂತೋಷ ತಂದ ಮತ್ತೊಂದು ಅಂಶ.

ಕಲಾವಿದರ ಪುಸ್ತ್ತಕ ಮಾಲೆಯ ಸಂಪಾದಕರಾದ ಶ್ರೀ ಎಚ್.ಎನ್.ಸುರೇಶ್ ಹಾಗೂ ಗ್ರಂಥಕರ್ತರಾದ ಎನ್.ಮರಿಶಾಮಾಚಾರ್ ಅವರಿಗೆ ನನ್ನ ವಂದನೆಗಳು. ಈ ಪುಸ್ತಕವನ್ನು ವಿನ್ಯಾಸಗೊಳಿಸಿದ ಶ್ರೀ ಚಿ.ಸು.ಕೃಷ್ಣಶೆಟ್ಟಿ ಅವರಿಗೆ ವಂದನೆಗಳು.

ವಿದ್ವಾಂಸರಿಗೂ, ಕಲಾ ವಿದ್ಯಾರ್ಥಿಗಳಿಗೂ ಏಕರೂಪವಾಗಿ ಉಪಯುಕ್ತವಾಗುವ ಈ ಕಿರು ಪುಸ್ತಕವನ್ನು ಆತ್ಮೀಯತೆಯಿಂದ ಕಲಾಭಿಮಾನಿಗಳು ಸ್ವಾಗತಿಸುವರೆಂಬ ನಂಬಿಕೆ ನನಗಿದೆ.

ಆರ್.ಎಂ.ಹಡಪದ್

ಅಧ್ಯಕ್ಷ

ಕರ್ನಾಟಕ ಲಲಿತಕಲಾ ಅಕಾಡೆಮಿ

ಎಸ್.ಎನ್. ಸ್ವಾಮಿ

ಎಸ್.ಎನ್. ಸ್ವಾಮಿಯವರು ರೇಖಾ ಚಿತ್ರಗಳ ಮೂಲಕ ಸಿದ್ಧಿ ಪಡೆದಿದ್ದಾರೆ. ಅವರ ಕೈ ಚಿತ್ರಿಸುವುದು ಅಂತರಾಳದ ಪ್ರಕ್ರಿಯೆ. ರೇಖಾ ಚಿತ್ರದ ಮೇಲೆ ಅವರಿಗೆ ಬಹಳ ಪ್ರೀತಿ. ಸ್ವಾಮಿಯವರ ಈ ಸಿದ್ಧಿಯ ಹಂತದಲ್ಲಿ ವಿವಿಧ ಭಾವನೆಗಳ ಪ್ರಕಟಣೆ ಹಾಗೂ ಕೈ ಚಳಕ ಸಾಧಿಸಿರುವುದು ಕಂಡುಬರುತ್ತದೆ. ಅವರ ರೇಖಾಚಿತ್ರಗಳ ಮಾಗಿದ ಪರಿಣಾಮ ಮತ್ತು ಕುಸುರಿ ಕೆಲಸದ — ಕೈಚಳಕ, ಭಾವನೆಗಳನ್ನು ಚಿತ್ರದಲ್ಲಿ ಅಭಿವ್ಯಕ್ತಿಸುವುದು.

ಭಾವಚಿತ್ರ ರಚನೆಯಿಂದಲೇ ಪ್ರಖ್ಯಾತರಾದ ಸಿಂಗಣ್ಣಾಚಾರ್ಯ ನರಸಿಂಹ ಸ್ವಾಮಿಯವರು. ತಂದೆ ಸ್ವರ್ಣ ಕಲಾನಿಪುಣರೆಂಬ ಬಿರುದು ಪಡೆದಿದ್ದು ಶಿಲ್ಪಕಲಾ ಪಿತಾಮಹ ಸಿಂಗಣ್ಣಾಚಾರ್ಯ ಮತ್ತು ತಾಯಿ ತಾಯಮ್ಮನವರ ಮಗನಾಗಿ 1911 ರಲ್ಲಿ ಮೈಸೂರಿನಲ್ಲಿ ಜನಿಸಿದರು. ಕಲಾವಿದರ ಮನೆತನದಿಂದ ಕೂಡಿದ್ದ ವಾತಾವರಣ, ಬಾಲ್ಯದಲ್ಲೇ ಕಲೆಯ ಒಂದು

ಮಧುರ ಸನ್ನಿವೇಶದಲ್ಲಿ ಬೆಳೆದು, ಕಲೆಯಲ್ಲಿ ಆಸಕ್ತಿ ಮೂಡಲು ಕಾರಣವಾಯಿತು. ತಂದೆ ಸಿಂಗಣ್ಣಾಚಾರ್ಯರು ಮೈಸೂರಿನ ಅರಮನೆಗೆ ಹೋಗುತ್ತಿದ್ದು, ಅಲ್ಲಿ ಒಂದಲ್ಲ ಒಂದು ಕೆಲಸವಿದ್ದುದರಿಂದ, ಸ್ವಾಮಿಯವರು ಸಹ ಆಗಾಗ ಅರಮನೆಗೆ ಹೋಗಲು ಅವಕಾಶವಾಯಿತು ತಂದೆ ಸಿಂಹಾಸನ, ಅಂಬಾರಿ ಮತ್ತು ಅನೇಕ ವಿಗ್ರಹಗಳನ್ನು ರಚಿಸುತ್ತಿದ್ದಾಗ, ತಂದೆಯವರು ಕಡೆಯುತ್ತಿದ್ದ ಮೂರ್ತಿಗಳನ್ನು ನೋಡಿ, ತಾವೂ ರೇಖಾಚಿತ್ರಗಳನ್ನು ಚಿತ್ರಿಸುತ್ತಿದ್ದರು. ರಾಜಾಶ್ರಯ ಪಡೆದಿದ್ದ ರವಿವರ್ಮ ಬರೆದ ಚಿತ್ರಗಳನ್ನು ದಿನವೂ ಸ್ವಾಮಿಗಳು ನೋಡುತ್ತಿದ್ದರು. ಅವುಗಳನ್ನು ಒಂದೊಂದು ಸಲ ನೋಡಿದಾಗಲೂ ರವಿವರ್ಮನ ಚಿತ್ರಗಳು ಯವರ ಮೇಲೆ ಪ್ರಭಾವ ಬೀರಿ, ಕ್ರಮೇಣ ಅವರಿಗೆ ಅರಿವಿಲ್ಲದೆಯೇ ಅವರ ಮನಸ್ಸು ಸಂಪೂರ್ಣವಾಗಿ ಚಿತ್ರಕಲೆಯ ಕಡೆ ತಿರುಗಿತು.

ಸಿಂಗಣ್ಣಾಚಾರ್ಯರಿಗೆ ತಮ್ಮ ಮಗ ಒಬ್ಬ ಪದವೀಧರನಾಗಬೇಕೆಂದು ಆಸೆಯಿತ್ತು. ಸ್ವಾಮಿಯವರ ಅತೀವವಾದ ಕಲಾಭಿರುಚಿ ವಿದ್ಯಾಭ್ಯಾಸಕ್ಕೆ ಅಡ್ಡಿ ತಂದೊಡ್ಡಿತು. ಮೈಸೂರಿನ ಮಿಷನ್ ಪ್ರೌಢಶಾಲೆಯಲ್ಲಿ ಮೆಟ್ರಿಕ್ ಪರೀಕ್ಷೆಯವರೆಗೂ ಓದಿ, ವ್ಯಾಸಂಗವನ್ನು ಕೈಬಿಟ್ಟರು. ಸ್ವಾಮಿಯವರ ಕಲಾಭಿರು–ಚಿಯ ಮನೋಧರ್ಮವನ್ನು ತಿಳಿದು, ಅವರ ತಂದೆ ರಾಜ್ಯದ ಅತ್ಯಂತ ಹಿರಿಯ ತಾಂತ್ರಿಕ ಶಾಲೆಯಾದ ಶ್ರೀ ಚಾಮರಾಜೇಂದ್ರ ತಾಂತ್ರಿಕ ಶಾಲೆಗೆ 1928ರಲ್ಲಿ ಸೇರಿಸಿದರು. ಅಲ್ಲಿ ಕೇಶವಯ್ಯನವರಂಥ ಪ್ರಸಿದ್ಧ ಕಲಾವಿದರು ಕಲಾಧ್ಯಾಪಕರಾಗಿದ್ದರು. ಅವರ ಸೂಕ್ತ ಮಾರ್ಗದರ್ಶನದಲ್ಲಿ ಕಲೆಯ ವಿವಿಧ ವಿಷಯಗಳನ್ನು ಕಲಿತರು. ನಾಲ್ಕು ವರ್ಷಗಳ ಪರಿಶ್ರಮದ ಕಲಾಶಿಕ್ಷಣವನ್ನು 1932ರಲ್ಲಿ ಮುಗಿಸಿದರು.

ಅರಸರ ಪ್ರೋತ್ಸಾಹ

ಸ್ವಾಮಿಯವರು ತಂದೆಯವರ ಜೊತೆಯಲ್ಲಿ ಈ ಮಧ್ಯೆ ಅರಮನೆಗೆ ಹೋಗಿ ಬರುತ್ತಿದ್ದಾಗ, ಅಂದಿನ ಪ್ರಭುಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೃಷ್ಟಿಗೆ ಬೀಳುವ ಸೌಭಾಗ್ಯ ಅವರ ಪಾಲಿಗೆ ದೊರಕಿ ಅವರ ಕೆಲವು ರೇಖಾಚಿತ್ರಗಳು ಅರಸರ ದೃಷ್ಟಿಗೆ ಬಿದ್ದಿತು. ಚಿತ್ರಗಳನ್ನು ನೋಡಿದ ಮಹಾರಾಜರು ನರಸಿಂಹಸ್ವಾಮಿಯವರಿಗೆ ಬಹಳವಾಗಿ ಪ್ರೋತ್ಸಾಹ

ನೀಡಿದರು. ಒಂದುಸಲ ಅವರ ಭಾವಚಿತ್ರವನ್ನು ರಚಿಸಿ ಕೊಟ್ಟಿದ್ದಕ್ಕಾಗಿ ಅಪರಿಮಿತವಾಗಿ ಸಂತೋಷಗೊಂಡರು. ಒಮ್ಮೆ ಮಹಾರಾಜರು ಇರ್ವಿನ್ ರಸ್ತೆಯ ಮೂಲಕ ಗೆಸ್ಟ್‌ಹೌಸಿನ ಕಡೆ ತಮ್ಮ ಕಾರಿನಲ್ಲಿ ಹೋಗುತ್ತಿದ್ದಾಗ ಸ್ವಾಮಿಯವರು ಅವರ ಮನೆಯ ಮುಂದೆ ಗೆಳೆಯರೊಡನೆ ಹರಟೆ ಕೊಚ್ಚುತ್ತಾ ನಿಂತಿರುವುದು ಅವರ ದೃಷ್ಟಿಗೆ ಬಿದ್ದಿತು. ಮಹಾರಾಜರನ್ನು ಕಾಣುತ್ತಿದ್ದಂತೆಯೇ ಸ್ವಾಮಿಯರು ಮನೆಯೊಳಗೆ ಧಾವಿಸಿ ಅಡಗಿಕೊಂಡರು. ಆದರೆ ಮಹಾರಾಜರು ಅಷ್ಟಕ್ಕೆ ಬಿಡದೆ ಸ್ವಾಮಿಯವರನ್ನು ಕರೆಸಿ ಹಾಗೆಲ್ಲ ಕಾಲಹರಣ ಮಾಡದೆ ಕಲಾಭ್ಯಾಸದಲ್ಲಿ ತೊಡಗಬೇಕೆಂದು ಹೇಳಿದರು.
ಅವರ ಅಪ್ಪಣೆಯಂತೆ ಸ್ವಾಮಿಯವರು ಒಂದು ಉತ್ತಮವಾದ ಚಿತ್ರ ರಚಿಸಿ, ಅವರಿಗೆ ತೋರಿಸಿದರು. ಅದನ್ನು ಬಹಳವಾಗಿ ಮೆಚ್ಚಿಕೊಂಡು, ಸ್ವಲ್ಪ ಹಣ ನೀಡಿದರು.

ಮಹಾರಾಜರು ಸ್ವಾಮಿಯವರಲ್ಲಿದ್ದ ಕಲೆಯನ್ನು ಗುರ್ತಿಸಿ, 1930ರಲ್ಲಿ ಮುಂಬಯಿನ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಚಿತ್ರಕಲೆಯಲ್ಲಿ ಉನ್ನತ ಶಿಕ್ಷಣಕ್ಕಾಗಿ ಕಳುಹಿಸಿಕೊಟ್ಟು, ವಿದ್ಯಾಭ್ಯಾಸದ ವೆಚ್ಚವನ್ನು ತಾವೇ ವಹಿಸಿಕೊಂಡರು. ಮಹಾರಾಜರು ಮುಂಬಯಿಗೆ ಆಗಾಗ ಹೋದಾಗಲೂ ಕೂಡ ಅವರು ಸ್ವಾಮಿಯವರನ್ನು ಕರೆಸಿ, ಪ್ರೋತ್ಸಾಹದ ಮಾತುಗಳನ್ನು ಹಾಗೂ ಹಣ ಕೊಡುತ್ತಿದ್ದರು.

ಮುಂಬಯಿಯಲ್ಲಿ

ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕಲಾ ಶಿಕ್ಷಕರಾದ ಪುರಂಧರ್ ಅವರ ಶಿಷ್ಯರಾಗಿ ಅಕಾಡೆಮಿಕ್ ಶೈಲಿಯ ಶಿಕ್ಷಣ ಪಡೆದು, ಅಲ್ಲಿ ಲೈಫ್‌ಸ್ಕೆಚ್ ಬರೆಯುವುದರಲ್ಲಿ ಸಾಕಷ್ಟು ಪರಿಶ್ರಮ ಸಂಪಾದಿಸಿದರು. ಮಾನವನ ಚಿತ್ರಗಳನ್ನು ರಚಿಸಬೇಕಾದರೆ, ವ್ಯಕ್ತಿಯ ನಿಕಟ ಪರಿಚಯ ಅಗತ್ಯ. ಮುಖದ ಪ್ರತಿಯೊಂದು ಗೆರೆಗಳನ್ನು ಮೂಡಿಸುವಾಗಲೂ, ಮುಖದ ನೈಜತೆ ಹಾಗೂ ವ್ಯಕ್ತಿತ್ವವನ್ನು ಪ್ರತಿಪಾದಿಸಬೇಕಾಗಿರುವುದರಿಂದ, ಚಿತ್ರ ರಚಿಸಬೇಕಾದ ವ್ಯಕ್ತಿಯ ಬಗ್ಗೆ ತಿಳಿದಿರುವುದು ಒಳ್ಳೆಯದು. ಸ್ವಾಮಿಯವರು ಸಾಮಾನ್ಯವಾಗಿ ಮಾನವರ ಭಾವಚಿತ್ರಗಳನ್ನು ರಚಿಸುವಾಗ ಈ ತಂತ್ರಗಳನ್ನು ಅನುಸರಿಸುತ್ತಿದ್ದರು. ಇದರಿಂದ ವ್ಯಕ್ತಿಗಳ ಭಾವಚಿತ್ರ, ಪೂರ್ಣಚಿತ್ರ ಮತ್ತು

ರೂಪದರ್ಶಿಗಳನ್ನು ಉಪಯೋಗಿಸಿ, ಚಿತ್ರ ರಚಿಸುವುದರಲ್ಲಿ ಸಿದ್ಧಿ ಪಡೆದರು. ಅಲ್ಲಿ ಅನೇಕ ಹಿರಿಯ ಕಿರಿಯ ಕಲಾವಿದರ ಸಹವಾಸ ಸಂಪರ್ಕವಾಗಿ ಭಾವಚಿತ್ರ ರಚನೆಯಲ್ಲಿ ಸ್ವಾಮಿಯವರ ಕೈ ಚೆನ್ನಾಗಿ ಪಳಗಿತು.

ಅವರ ತೈಲವರ್ಣಗಳ ಚಿತ್ರಗಳಲ್ಲಿ ವರ್ಣ ಮಿಶ್ರಣದ ತಂತ್ರ ಹಾಗೂ ಸನ್ನಿವೇಶಗಳನ್ನು ಅರಿತು, ಚಿತ್ರರಚನೆಗೆ ಸಾಂಪ್ರದಾಯಿಕ, ಅತಿ ಸೂಕ್ಷ್ಮ ವಿಷಯಗಳತ್ತ ಗಮನ ಹರಿಸಿದ್ದರು. ಮುಂಬಯಿನ ಆರ್ಟ್ ಸೊಸೈಟಿಯಲ್ಲಿ ಕಲಾವಿದರಾದ ಸರ್ ದೇಸಾಯಿ, ಹಲ್ದಂಕರ್, ಪಿತಾವಲ ಮತ್ತು ಕರ್ಮರ್‌ಕರ್ ಮುಂತಾದವರು ಪ್ರತಿ ಭಾನುವಾರ ಸೇರಿ, ಕಲೆಯ ಬಗ್ಗೆ ಚರ್ಚಿಸುತ್ತಿದ್ದರು. ಈ ಕಲಾವಿದರ ಕೂಟದಲ್ಲಿ ಸ್ವಾಮಿಯವರು ಒಬ್ಬ ಸದಸ್ಯರಾಗಿ, ಭಾಗವಹಿಸುತ್ತಿದ್ದಾಗ, ಅಲ್ಲಿಗೆ ಬರುತ್ತಿದ್ದ, ಭಾವಚಿತ್ರ ರಚನೆಯಲ್ಲಿ ಚಿತ್ರ ರಚಿಸುತ್ತಿದ್ದ ಎ.ಎಕ್ಸ್ ಟೆಂಡಾಡ್ ಎಂಬ ಕಲಾವಿದರ ಪರಿಚಯವಾಗಿ, ಭಾವಚಿತ್ರದ ಬಗ್ಗೆ ಅನೇಕ ಮಾರ್ಗದರ್ಶನ, ಸಲಹೆಗಳನ್ನು ಸ್ವಾಮಿಯವರಿಗೆ ನೀಡುತ್ತಾ ಬಂದರು. ಹೀಗೆ ಈ ಎಲ್ಲಾ ಹಿರಿಯ ಕಲಾವಿದರ ಸಹವಾಸ, ಸಂಪರ್ಕ ಶ್ರೀಯುತರಿಗೆ ದೊರೆತದ್ದು, ಭಾವಚಿತ್ರ ರಚನೆಯಲ್ಲಿ ಸ್ವತಂತ್ರ ದಾರಿ ಕಂಡುಕೊಳ್ಳಲು ಸಾಧ್ಯವಾಯಿತು.

ಸ್ವಾಮಿಯವರು ಮಹಾರಾಷ್ಟ್ರದ ಮಹಿಳೆಯೊಬ್ಬರನ್ನು ರೂಪದರ್ಶಿಯಾಗಿ ಕುಳ್ಳರಿಸಿ, ಭಾವಚಿತ್ರ ರಚಿಸಿ, ಈ ಚಿತ್ರಕ್ಕೆ 'ಮೈ ಮಾಡೆಲ್' ಎಂಬ ಶೀರ್ಷಿಕೆ ನೀಡಿ, ಸಿಮ್ಲಾ ಕಲಾಪ್ರದರ್ಶನಕ್ಕೆ ಕಳುಹಿಸಿದರು. ಅಲ್ಲಿ ಈ ಚಿತ್ರಕ್ಕೆ ರಜತ ಪದಕ ಬಂದಿತು. ಸ್ವಾಮಿಯವರ ಮಿತ್ರ ಮ್ಯಾಕ್‌ಮಿಲನ್ ಎಂಬುವರು ಆ ಚಿತ್ರದ ರೂಪದರ್ಶಿಯ ಪರಿಚಯ ಮಾಡಿಕೊಡಬೇಕೆಂದು ಒತ್ತಾಯಿಸಿದಾಗ, ಪರಿಚಯ ಮಾಡಿಕೊಟ್ಟಮೇಲೆ ಅನಂತರ ಆ ಮಿತ್ರ ನಾಪತ್ತೆಯಾದನು.

ಅನಂತರ ಈ ಗೆಳೆಯ ರಚಿಸಿದ್ದ ರೂಪದರ್ಶಿಯ ಚಿತ್ರಗಳಿಗೆ ಪ್ರಶಸ್ತಿ ಬಂದಿತು. ಈ ಸಂತೋಷಕ್ಕಾಗಿ ಆತನ ಗೆಳೆಯರು ಹೋಟೆಲ್ ತಾಜ್‌ಮಹಲ್‌ನಲ್ಲಿ ಸಂತೋಷ ಕೂಟವನ್ನು ವ್ಯವಸ್ಥೆ ಮಾಡಿದ್ದರು. ಈ ಸಂತೋಷ ಕೂಟಕ್ಕೆ ಬರುವಂತೆ ಸ್ವಾಮಿಯವರಿಗೂ ಆಹ್ವಾನ ಬಂದಿತ್ತು. ಸ್ವಾಮಿಯವರು ಈ ಸಂತೋಷಕೂಟದಲ್ಲಿ ಭಾಗವಹಿಸಿದಾಗ, ಅವರ

ಗೆಳೆಯನು ತಮ್ಮ ಕಲಾಕೃತಿಗಳಿಗೆ ಪ್ರಶಸ್ತಿ ಬಂದಿದ್ದರೆ, ಅದು ಸ್ವಾಮಿಯವರಿಗೆ ಸಲ್ಲಬೇಕೆಂದು ಹೇಳಿದನು. ಸ್ವಾಮಿಯವರ ''ಮೈ ಮಾಡೆಲ್'' ಕೃತಿ ಅನಂತರ ಮೈಸೂರಿನ ದಸರಾ ಕಲಾಪ್ರದರ್ಶನದಲ್ಲೂ ಪ್ರದರ್ಶಿತವಾದಾಗ ಎಸ್.ಬಿ. ಶಾಸ್ತ್ರಿಯವರ ಬಹುಮಾನವೂ ದೊರಕಿತು. ಮುಂಬಯಿಯ ಚೋರ್ ಬಜಾರ್‌ಗೆ ನಿತ್ಯವೂ ಹೋಗಿ ಬರುತ್ತಾ ಸ್ವಾಮಿಗಳು, ಅನೇಕ ಶೀಘ್ರ ರೇಖಾ ಚಿತ್ರಗಳನ್ನು ರಚಿಸಿದ್ದರು.

ರೇಖಾಚಿತ್ರ ಕಲೆಯ ಒಂದು ಪ್ರಕಾರವಾಗಿದ್ದು, ಕೆಲವರಿಗೆ ಅದು ಮೂಲಭೂತ ಕಲೆಯೂ ಆಗಿದೆ. ರೇಖಾಚಿತ್ರಗಳ ಮೂಲಕ ಕಲಾವಿದ, ಹೊಸ ಕಲಾಭಾಷೆಯನ್ನು ದಿಟವಾಗಿ ಅಭಿವ್ಯಕ್ತಗೊಳಿಸಲು ಪ್ರಯತ್ನಿಸುತ್ತಾರೆ. ಇದು ಸಹ ವಿವಿಧ ಕಲಾಶೈಲಿಗಳಂತೆ ಕಲಾವಿದನ ವೈಯಕ್ತಿಕ ಕಲಾಶೈಲಿ ಎನಿಸಿಕೊಳ್ಳುತ್ತದೆ. ರೇಖಾ ಚಿತ್ರಗಳು ಮುಖ್ಯವಾಗಿ ರೇಖೆಗಳಿಂದ ರೂಪಿತ ವಾಗಿರುತ್ತದೆ. ಚಿತ್ರಕ್ಕೆ ರೇಖೆಗಳು ಜೀವಂತಿಕೆಯನ್ನು ನೀಡುತ್ತವೆ ಮತ್ತು ಚಿತ್ರದಲ್ಲಿ ಕುಶಲತೆ ಒಂದು ಭಾಗವೇ ಆಗಿರುತ್ತದೆ. ಇದೇ ರೀತಿ ಸ್ವಾಮಿಯವರು ತಾವು ದಿನವೂ ಚೋರ್ ಬಜಾರ್‌ನಲ್ಲಿ ಕಂಡ ಜನರು, ಮನೆಗಳು, ಶ್ರಮಜೀವಿಗಳು ಮತ್ತು ಪರಿಸರವನ್ನು ಶೀಘ್ರವೇ ರಚಿಸಿ, ರೇಖೆಗಳಲ್ಲಿ ಹತೋಟಿಯಿದ್ದು, ಅತಿ ಸೂಕ್ಷ್ಮ ವಿವರಣಾತ್ಮಕವಾದ ರೇಖೆಗಳಿಂದ ಚಿತ್ರಿಸಿದ್ದಾರೆ. ರೇಖಾಚಿತ್ರಗಳು ವಾಸ್ತವಿಕತೆಯಿಂದ ಕೂಡಿವೆ.

ಸ್ವಾಮಿಯವರು ಬೇಲೂರು, ಹಳೇಬೀಡುಗಳ ಶಿಲಾಬಾಲಿಕೆಯರ ಶಿಲ್ಪಗಳ ರೇಖಾ ಚಿತ್ರಗಳನ್ನು ಚಿತ್ರಿಸಿದ್ದು, ಅವುಗಳ ಭಾವಪೂರ್ಣತೆ, ಸೌಂದರ್ಯ ಮತ್ತು ವಿವಿಧ ಭಾವಗಳ ನಿರೂಪಣೆ ಇವುಗಳಿಂದಾಗಿ ಅವು ಚೇತೋಹಾರಿ ಯಾಗಿದ್ದವು. ಈ ಚಿತ್ರಗಳನ್ನು ತಮ್ಮ ಕಲಾಗುರುಗಳಾದ ಪುರಂದರ್ ಅವರಿಗೆ ತೋರಿಸಿದಾಗ, ಈ ರೇಖಾ ಚಿತ್ರಗಳನ್ನು ಮೆಚ್ಚಿಕೊಂಡು, ಶೀಘ್ರ ರೇಖಾ ಚಿತ್ರಗಳನ್ನು ರಚಿಸುವಂತೆ ಸಲಹೆ ನೀಡಿದರು. ಅಂದಿನಿಂದ ಮುಂಬಯಿನ ವಿವಿಧ ಕಡೆ ಹೋಗಿ ತಾವು ಕಂಡ ದೃಶ್ಯಗಳನ್ನು ಸ್ಕೆಚ್ ಪುಸ್ತಕದಲ್ಲಿ ಚಿತ್ರಿಸು ತ್ತಿದ್ದರು. ಈ ಸಂದರ್ಭದಲ್ಲಿ ರಚಿಸಿದ ಒಂದು ರೇಖಾಚಿತ್ರಕ್ಕೆ ಮದರಾಸಿನ ಕಲಾಪ್ರದರ್ಶನದಲ್ಲಿ ಬಹುಮಾನ ಬಂದಿತು. ಕಲಾವಿದ ಸರ್ ದೇಸಾಯಿಯವರು ಇವರನ್ನು ಮನೆಯಲ್ಲಿಯೇ ಇಟ್ಟುಕೊಂಡು, ಪ್ರೀತಿ

ವಿಶ್ವಾಸವನ್ನು ತೋರಿಸುತ್ತಾ ಭಾವಚಿತ್ರ ರಚನೆಗಳಲ್ಲಿ ಬೇಕಾದ ವರ್ಣ, ತಂತ್ರಗಳನ್ನು ತಿಳಿಸುತ್ತಿದ್ದರು, ಹಾಗೂ ಪ್ರೋತ್ಸಾಹಿಸುತ್ತಿದ್ದರು.

ಮುಂಬಯಿನ ಕಲಾವಿದ 'ಆಗಸ್ಕರ್' ಭಾವಚಿತ್ರ ರಚಿಸುವುದರಲ್ಲಿ ಅಗ್ರಗಣ್ಯರಾಗಿದ್ದು ಸ್ವಾಮಿಯವರು ಅವರ ಸ್ಟುಡಿಯೋಗೆ ಹೋಗಿ ಬರುತ್ತಿದ್ದು, ಸೀಸದ ಕಡ್ಡಿಯನ್ನು ಹಿಡಿಯಲು ಬಾರದಿದ್ದರೆ ಕುಂಚ ಹಿಡಿಯಲು ಎಲ್ಲಿ ಬಂದೀತು ಎನ್ನುತ್ತಿದ್ದ ಆಗಸ್ಕರ್. ಅವನು ಭಾವಚಿತ್ರವನ್ನು ರಚಿಸುತ್ತಿದ್ದ ರೀತಿ, ಸ್ವಾಮಿಯವರ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡಿತು ಮತ್ತು ರೇಖಾ ವಿನ್ಯಾಸಕ್ಕೆ ಅದೆಷ್ಟು ಮಹತ್ವವಿದೆಯೆಂಬುದನ್ನು ಅರಿತರು. ಮುಂಬಯಿಯಿಂದ ಬಂದಮೇಲೆ ಮೈಸೂರಿನ ಅರಮನೆಯಲ್ಲಿ 'ಅರಮನೆಯ ಕಲಾವಿದರಾಗಿ' ಕೆಲವು ವರ್ಷ ಕೆಲಸ ಮಾಡಿದರು. ಅಲ್ಲಿ ದರಬಾರ್‌ಹಾಲ್‌ನಲ್ಲಿ ಮೆರವಣಿಗೆಯ ಭಿತ್ತಿಚಿತ್ರ ಮತ್ತು ಕೃಷ್ಣರಾಜೇಂದ್ರ ಒಡೆಯರ್ ಅವರ ತೈಲವರ್ಣಚಿತ್ರ ರಚಿಸಿದ್ದಾರೆ. ಮೈಸೂರು ಅರಮನೆಯಲ್ಲಿ ಒಂದು ಪ್ಯಾನೆಲ್‌ನ್ನು ಚಿತ್ರಿಸಿದ್ದು, ಅದು ಯಥಾವತ್ತಾದ ರೂಪದಲ್ಲಿದ್ದು, ಮಹಾರಾಜರ ಅಂಗರಕ್ಷಕರ ಮತ್ತು ಮೈಸೂರು ಸಂಗೀತಗಾರರ ಚಿತ್ರವಿದ್ದು, ಅಂಗರಕ್ಷಕರ ಉಡುಗೆ, ತೊಡುಗೆ ಅವರ ನಿಲುವಿನ ಭಂಗಿ, ಮತ್ತು ಸಂಗೀತಗಾರನ ನೈಜತೆ ಮತ್ತು ಅಂದಿನ ಪರಿಸರದ ಚಿತ್ರಣವನ್ನು ಕಾಣಬಹುದು.

ಸ್ವತಂತ್ರದಾರಿ

ನರಸಿಂಹಸ್ವಾಮಿ ಅವರು ತಮ್ಮ ಕಲಾಶಿಕ್ಷಣ ಪಡೆದ ನಂತರ, ತಮ್ಮ ಜೀವನ ಕಲೆಗಾಗಿಯೇ ಮೀಸಲು ಎಂದು ನಿರ್ಧರಿಸಿ, ತಮ್ಮ ಕ್ಷೇತ್ರವನ್ನು ಭಾವಚಿತ್ರ ಮತ್ತು ರೇಖಾ ಚಿತ್ರಗಳನ್ನು ರಚಿಸುವುದರಲ್ಲಿ ಮಗ್ನರಾದರು. ಭಾವಚಿತ್ರ ರಚನೆಯಲ್ಲಿ ಸಾಮರ್ಥ್ಯ ಹಾಗೂ ರೇಖಾ ಚಿತ್ರಗಳಲ್ಲಿ ಭಾವಗಳ ನಿರೂಪಣೆಯಲ್ಲಿ ವೈಶಿಷ್ಟ್ಯಪೂರ್ಣತೆ, ಇವುಗಳಿಂದಾಗಿ ಅವು ಚೇತೋಹಾರಿ ಯಾಗಿರುವಂತೆ ರಚಿಸುವುದರಲ್ಲಿ ತಮ್ಮತನವನ್ನು ಕಂಡುಕೊಂಡರು. ಮುಂಬಯಿಯಲ್ಲಿ ವ್ಯಾಸಂಗವನ್ನು ಮುಗಿಸಿ ಮರಳಿದ ನಂತರ 1934 ರಲ್ಲಿ ವಿಶ್ವಕವಿ ರವೀಂದ್ರರ ಭಾವಚಿತ್ರವನ್ನು ಛಾಯಾಚಿತ್ರ ಒಂದರ ಆಧಾರದಿಂದ ರಚಿಸಿ, ರವೀಂದ್ರರಿಗೆ ಸಹಿಮಾಡಿ ಹಿಂದುರುಗಿಸಿ ಕಳುಹಿಸಿಕೊಡುವಂತೆ

ಕಳುಹಿಸಿಕೊಟ್ಟರು. ಕವಿವರ್ಯರು ತಮ್ಮ ರೇಖಾಚಿತ್ರವನ್ನು ಮೆಚ್ಚಿ ಅದರ ಮೇಲೆ ತಮ್ಮ ಸಹಿಯೊಡನೆ ಹಿಂದಿರುಗಿಸಿ 'ನೀವು ಪ್ರಪಂಚದ ಪ್ರಮುಖ ವ್ಯಕ್ತಿಗಳ ಭಾವಚಿತ್ರಗಳನ್ನು ರಚಿಸಿ, ಅವರ ಸಹಿ ಪಡೆದು ಕೀರ್ತಿ ಪಡೆಯಿರಿ' ಎಂದು ಪತ್ರ ಬರೆದು ಆಶೀರ್ವದಿಸಿದರು. ರವೀಂದ್ರರ ಈ ಮೆಚ್ಚುಗೆಯಿಂದ ಸ್ವಾಮಿಯವರು ಕಲೆಯಲ್ಲಿ ನೆಲೆ ಸ್ಥಾಪಿಸಿಕೊಳ್ಳಲು ಸಹಾಯಕವಾಯಿತು. ಅಂದಿನಿಂದ ಸೀಸದ ಕಡ್ಡಿಯಿಂದ ಮತ್ತು ತೈಲವರ್ಣದಲ್ಲಿ ಭಾವಚಿತ್ರಗಳನ್ನು ರಚಿಸಿ, ತಮ್ಮ ಜೀವಿತದ ಕೊನೆಯವರೆಗೂ ಈ ಮಾಧ್ಯಮಗಳಲ್ಲೇ ಕೃತಿಗಳನ್ನು ರಚಿಸಿದ್ದಾರೆ.

ವಿಶ್ವಕವಿ ರವೀಂದ್ರರ ಮಾತಿನಂತೆ, ಜಗತ್ತಿನ ಅನೇಕ ಸಾಮ್ರಾಟ, ಸಾಮ್ರಾಜ್ಞರನ್ನು ನಾಟಕಕಾರರನ್ನು ಲೇಖಕರನ್ನು ವಿಜ್ಞಾನಿಗಳನ್ನು ನಟನಟಿಯರನ್ನು ಮುಂತಾದವರ ಭಾವಚಿತ್ರಗಳನ್ನು ಛಾಯಾಚಿತ್ರದ ಸಹಾಯದಿಂದ ನೆರಳು ಬೆಳಕುಗಳು ಇರುವಂತೆ ರಚಿಸಿ, ಚಿತ್ರಗಳನ್ನು ಅವರಿಗೆ ಕಳುಹಿಸಿ, ಅವರಿಂದ ಹಸ್ತಾಕ್ಷರ ಹಾಗೂ ಮೆಚ್ಚುಗೆ ಪತ್ರಗಳನ್ನು ನೂರಾರು, ಭಾವಚಿತ್ರಗಳನ್ನು ಸಂಗ್ರಹಿಸಿದ್ದಾರೆ. ಸಾಮಾನ್ಯವಾಗಿ ಸೀಸದ ಕಡ್ಡಿಯಿಂದಲೇ ರಚಿಸಿದ್ದು, ಚಿಕ್ಕ ಚಿತ್ರಗಳ ರೂಪದಲ್ಲಿವೆ. ಕೆಲವು ಸಾಹಿತಿಗಳು ತಾವು ಬರೆದ ಪುಸ್ತಕಗಳನ್ನು ನೆನಪಿಗಾಗಿ ಕಳುಹಿಸಿ ಕೊಟ್ಟಿದ್ದಾರೆ.

ಅವರು ರಚಿಸಿರುವ ರೇಖಾಚಿತ್ರಗಳಲ್ಲಿ ಪ್ರಮುಖ ವ್ಯಕ್ತಿಗಳೆಂದರೆ, ಬರ್ನಾಡ್ ಷಾ, ಹಿಟ್ಲರ್, ಚೆಂಬರ್‌ಲಿನ್, ಚರ್ಚಿಲ್, ಮುಸಲೋನಿ, ಲೆನಿನ್, ಅಂತೋನಿ, ಈಡನ್, ವಿಲ್‌ಬ್ರಾಂಟ್, ಐನ್‌ಸ್ಟೈನ್, ಏಲೀಯಟ್, ವಾಲ್‌ಡಿಸ್ನಿ ಮುಂತಾದವರ ಚಿತ್ರಗಳಲ್ಲಿ ಅವರ ವೈಯಕ್ತಿಕವಾದ ಗುಣಗಳು ಕಂಡುಬರುವಂತೆ ಹಾಗೂ ಯುಥಾರ್ಥವಾಗಿ ಚಿತ್ರಿಸಿರುವುದು ಗಮನಾರ್ಹ. ಹೆಸರಾಂತ ಆಂಗ್ಲ ಸಾಹಿತಿ 'ಷಾ' ಅವರ ಭಾವಚಿತ್ರವನ್ನು ಬರೆದು ಅವರ ಬಳಿ ಸಹಿಗೆ ಕಳುಹಿಸಿದಾಗ ಅವರು "You have done too much justice to an old man like me" ಎಂದು ಮೆಚ್ಚುಗೆಯ ಪತ್ರ ಬರೆದಿದ್ದು, ಈಗ ಈ ಚಿತ್ರ ಲಂಡನ್ನಿನ ಭಾರತೀಯ ರಾಯಭಾರ ಕಛೇರಿಯಲ್ಲಿದೆ. ನ್ಯೂಯಾರ್ಕ್‌ನ ಇನ್ನೊಬ್ಬ ಲೇಖಕ ಡಾ. ವಿಲ್‌ಡ್ರಾಂಟ್ (Will Durant) ಸ್ವಾಮಿಯವರು ರಚಿಸಿದ ರೇಖಾ ಚಿತ್ರಗಳನ್ನು ನೋಡಿ "These Beautiful

Drawings are among the Finest that, I have ever see. I have rejoice to see that you have not allowed the Debenerate Elements in contemporary European Art to Affect your Stile'' .. ಎಂದು ಮೆಚ್ಚಿ ಪತ್ರ ಬರೆದಿದ್ದಾರೆ. ವಿಶ್ವದ ಅನೇಕ ಪ್ರಮುಖ ವ್ಯಕ್ತಿಗಳನ್ನು ರೇಖಾಚಿತ್ರ ಮತ್ತು ಕೆಲವು ತೈಲಚಿತ್ರಗಳನ್ನು ರಚಿಸಿದ್ದು, ಅವು ವಿದೇಶದ ಪ್ರಮುಖ ಸ್ಥಳಗಳಲ್ಲಿವೆ. ಪ್ಯಾರಿಸಿನ ಯುನೆಸ್ಕೊ ಭವನದಲ್ಲಿ ಗಾಂಧೀಜಿ, ವಾಷಿಂಗ್‌ಟನ್ನಿನ ಭಾರತೀಯ ರಾಯಭಾರ ಕಚೇರಿಯಲ್ಲಿ ಐನ್‌ಸ್ಟೈನ್, ಮುಂತಾದವರ ಚಿತ್ರಗಳಿವೆ.

ಅಂತೆಯೇ ಭಾರತದ ಪ್ರತಿಷ್ಠ ವ್ಯಕ್ತಿಗಳಾದ ಗಾಂಧಿ, ನೆಹರು, ರಾಜೇಂದ್ರ ಪ್ರಸಾದ್, ರಾಧಾಕೃಷ್ಣನ್, ಸರ್. ಎಂ. ವಿಶ್ವೇಶ್ವರಯ್ಯ ಇಂದಿರಾಗಾಂಧಿ ಮುಂತಾದವರ ಚಿತ್ರಗಳಲ್ಲಿ ಮುಖದಲ್ಲಿನ ಭಾವನೆ ಹಾಗೂ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ಸ್ವಾಮಿಯವರ ವಿಶಿಷ್ಟ ರೀತಿಯ ರೇಖೆಗಳು, ಮತ್ತು ಅಭಿವ್ಯಕ್ತಿಯ ಪರಿಣಾಮದಿಂದ ಅವಲಂಬಿತವಾಗಿರುತ್ತದೆ ಹಾಗೂ ರಚನಾ ವಿನ್ಯಾಸದಲ್ಲಿ ಆಸಕ್ತಿಯನ್ನುಂಟು ಮಾಡುತ್ತದೆ.

1940 ರಲ್ಲಿ ಸ್ವಾಮಿಯವರು ವಾರ್ಧಾಕ್ಕೆ ಹೋಗಿ ಮಹಾತ್ಮಗಾಂಧೀಯವರ ದರ್ಶನ ಪಡೆಯುವ ಸುಯೊಗ ದೊರಕಿತು. ತಾವು ರಚಿಸಿದ್ದ ಚಿತ್ರಗಳನ್ನೆಲ್ಲಾ ಬಾಪೂಜಿಯವರ ಅಡಿದಾವರೆಯಲ್ಲಿಟ್ಟು ಸಾಷ್ಟಾಂಗ ಪ್ರಣಾಮ ಮಾಡಿದರು. ಗಾಂಧೀಜಿಯವರು ಸ್ವಾಮಿಯವರು ರಚಿಸಿರುವ ಒಂದೊಂದೇ ಚಿತ್ರವನ್ನು ಆಸಕ್ತಿಯಿಂದ ನೋಡಿ, ತುಂಬಾ ಸಂತೋಷದಿಂದ ಸ್ವಾಮಿಯವರನ್ನು ಆಶೀರ್ವದಿಸಿ, ತಮ್ಮ ಮೆಚ್ಚುಗೆ ಯನ್ನು ಸೂಚಿಸಿದರು. ಅಲ್ಲದೆ ಗಾಂಧೀಯವರ ಚಿತ್ರವನ್ನು ತೈಲವರ್ಣದಲ್ಲಿ ರಚಿಸಿದರು. ಈ ಚಿತ್ರದಲ್ಲಿ ಅದರ ಮೇಲೆ 'ನಿಜವಾದ ಕಲೆ ಅಮರವಾದುದು' ಎಂದು ಗುಜರಾತಿ ಭಾಷೆಯಲ್ಲಿ ಗಾಂಧಿ ಬರೆದಿದ್ದಾರೆ.

ಅನಂತರ ಅನೇಕ ಗಾಂಧೀಜಿಯ ಭಾವಚಿತ್ರಗಳನ್ನು ರಚಿಸಿದ್ದು, ಅವುಗಳನ್ನು ಭಾರತದ ಮಾಜಿ ರಾಷ್ಟ್ರಪತಿಗಳಾಗಿದ್ದ ಡಾ: ರಾಧಾಕೃಷ್ಣನ್ ಅವರು 'ಯುನೆಸ್ಕೊ' ಸಂಸ್ಥೆಗೆ ಒಂದು ಚಿತ್ರವನ್ನು ಉಡುಗೊರೆ ನೀಡಿದ್ದಾರೆ. ಮೊರಾರ್ಜಿ ದೇಸಾಯಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಹತ್ತು

ಪೂರ್ಣಾಕೃತಿಯ ಗಾಂಧೀಜಿಯವರ ಚಿತ್ರಗಳನ್ನು ಮಾಡಿಸಿ, ಭಾರತ ಸರ್ಕಾರದ ಪ್ರಮುಖ ಇಲಾಖೆಗಳಲ್ಲಿರುವಂತೆ ಮಾಡಿದರು. ಗಾಂಧೀಜಿಯವರ ಚಿತ್ರಗಳನ್ನು ನೆಹರೂ ಅವರು ಕೊಂಡು ತಮ್ಮ ಅತಿಥಿ ಗೃಹದಲ್ಲಿ ಇರಿಸಿಕೊಂಡಿದ್ದರು. ಈಗ ಅದು ತೀನ್‌ಮೂರ್ತಿ ಭವನದ ಸಂಗ್ರಹಾಲಯದಲ್ಲಿದೆ.

ಸ್ವಾಮಿಯವರು ಬೇಲೂರು ಮತ್ತು ಹಳೆಯ ಬೀಡು ದೇವಸ್ಥಾನದಲ್ಲಿರುವ ಶಿಲಾಬಾಲಿಕೆಯರ ಶಿಲ್ಪಗಳನ್ನು ಅಭ್ಯಸಿಸುತ್ತಿದ್ದಾಗ, ನೃತ್ಯಭಂಗಿಗಳ ಶಿಲ್ಪಗಳು ಅವರ ಮೇಲೆ ಹೆಚ್ಚು ಪ್ರಭಾವ ಬೀರಿತು. ಶಿಲಾಬಾಲಿಕೆಯರ ನೃತ್ಯಭಂಗಿಗಳನ್ನು ಯಥಾವತ್ತಾಗಿ ಈ ರೇಖಾ ಚಿತ್ರಗಳಲ್ಲಿ ಚಿತ್ರಿಸುತ್ತಿದ್ದಾಗ, ತಾವು ಏಕೆ ನೃತ್ಯ ಕಲಿಯಬಾರದು ಎಂದೆನಿಸಿತು. 1940ರಲ್ಲಿ ಶ್ರೀ ಬಿಡಾರಂ ಕೃಷ್ಣಪ್ಪನವರ ರಾಮಮಂದಿರದಲ್ಲಿ ಅನೇಕ ವಿದ್ವಾಂಸರ ಭಾವಚಿತ್ರಗಳನ್ನು ರಚಿಸುವ ಅವಕಾಶ ದೊರೆತು, ಇದೇ ಸಂದರ್ಭದಲ್ಲಿ ಹೆಸರಾಂತ ನೃತ್ಯಗಾರ್ತಿ ಜಟ್ಟಿತಾಯಮ್ಮನವರ ಹೆಸರು ಜನಪ್ರಿಯವಾಗಿತ್ತು. ಸ್ವಾಮಿಯವರು ಜಟ್ಟಿತಾಯಮ್ಮನವರ ಬಳಿ ನೃತ್ಯ ಕಲಿಯುವ ಆಸೆಯನ್ನು ವ್ಯಕ್ತಪಡಿಸಿದರು ಮತ್ತು ಆಕೆಯ ಬಳಿ ನೃತ್ಯ ಕಲಿತರು.


ಕಲಾವಿದ ಪಿ.ಆರ್. ತಿಪ್ಪೇಸ್ವಾಮಿಯವರು, ಸ್ವಾಮಿಯವರು ನೃತ್ಯ ಕಲಿಯುತ್ತಿದ್ದಾಗ, ಒಂದು ಪ್ರಸಂಗವನ್ನು ತಿಳಿಸುತ್ತಾ, ಒಮ್ಮೆ ಕೈಲಾಸಂ ಅವರು ನೃತ್ಯಭ್ಯಾಸ ನಡೆಯುತ್ತಿದ್ದ ಸ್ಥಳಕ್ಕೆ ಬಂದು ಜಟ್ಟಿತಾಯಮ್ಮನವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಅಲ್ಲೆ ಇದ್ದ ಸ್ವಾಮಿಗಳತ್ತ ತಿರುಗಿ ನಗುತ್ತ ''ಎಲೋ ಸ್ವಾಮಿ - ನೀನು ಪುಣ್ಯ ಮಾಡಿದ್ದೆ. ಇಂಥ ಅಜ್ಜಿಯಿಂದ ಪಾಠ ಹೇಳಿಸಿಕೊಳ್ಳೊದಕ್ಕೆ ಈ ಹೆಂಗಸು ಪ್ಯಾರಿಸಿನಲ್ಲೋ ಲಂಡನ್ನಿನಲ್ಲೋ ಇದ್ದಿದ್ದರೆ ಚಿನ್ನದ ಪ್ರತಿಮೆ ಮಾಡಿಸಿ ಪಾರ್ಕಿನಲ್ಲಿ ಮೆರೆಸುತ್ತಿದ್ದರು!'' ಎಂದು ಹೇಳಿದ ಸಂದರ್ಭವನ್ನು ಸ್ವಾಮಿಯವರು ನೆನೆದ ಪ್ರಸಂಗವನ್ನು ಈ ರೀತಿ ಬರೆದಿದ್ದಾರೆ. ಇಂಥ ಹೆಸರಾಂತ ಕಲಾವಿದೆಯ ಬಳಿ ನೃತ್ಯ ಕಲೆಯನ್ನು ಕಲಿತು ಪಂಡಿತ್ ನೆಹರೂ, ರಾಧಾಕೃಷ್ಣನ್, ಮಹರಾಜು ಕಾಲೇಜು ಮುಂತಾದ ಕಡೆ ತಮ್ಮ ನೃತ್ಯಕಲೆಯನ್ನು ಪ್ರದರ್ಶಿಸಿದ್ದರು.


ನೆಹರೂ ಕುಟುಂಬದೊಡನೆ

ಭಾರತಕ್ಕೆ ಸ್ವಾತಂತ್ರ್ಯ ದೊರೆತ ವೇಳೆಯಲ್ಲಿ ಪಂಡಿತ್ ಜವಹರಲಾಲ್ ನೆಹರೂ ಅವರು ಸ್ವಾಮಿಯವರನ್ನು ಕರೆಸಿ, ಲಾರ್ಡ್ ಮೌಂಟ್ ಬ್ಯಾಟನ್‌ರ ಪೂರ್ಣಾಕೃತಿಯ ಚಿತ್ರ ರಚಿಸಲು ದೆಹಲಿಗೆ ಆಹ್ವಾನಿಸಿದರು. ಈ ಚಿತ್ರವನ್ನು ಆರು ತಿಂಗಳು ಮೌಂಟ್ ಬ್ಯಾಟನ್ ಅವರ ರೂಪದರ್ಶಿ ಪಡೆದು ಚಿತ್ರ ರಚಿಸುತ್ತಿದ್ದಾಗ, ನೆಹರು ಅವರು ಆಗಾಗ ಬಂದು ಚಿತ್ರವನ್ನು ವೀಕ್ಷಿಸಿ, ಅವರೊಡನೆ ಕುಳಿತು ಚರ್ಚಿಸುತ್ತಿದ್ದರು. ಇದು ಸ್ವಾಮಿಯವರು ನೆಹರು ಅವರೊಡನೆ ನಿಕಟ ಸಂಪರ್ಕಕ್ಕೆ ಸ್ವಾಗತವಾಯಿತು. ಈಗ ಈ ತೈಲವರ್ಣದ ಚಿತ್ರ ಲಂಡನ್ನಿನ ಇಂಡಿಯಾ ಹೌಸ್‌ನಲ್ಲಿದೆ.

ಲೇಡಿ ಮೌಂಟ್‌ಬ್ಯಾಟನ್‌ರು ಮರಣದ ಕಾಲಕ್ಕೆ ಬ್ರಹ್ಮದೇಶದಲ್ಲಿ ಸೇಂಟಜಾನ್ ಅನಬುಲೆನ್ಸ್ ಬ್ರಿಗೇಡಿನ ಸುಪರಿಂಟೆಂಡಂಟರಾಗಿದ್ದರು. ಸ್ವಾಮಿಯವರು ಲೇಡಿ ಮೌಂಟಬ್ಯಾಟನ್‌ರನ್ನು ಅವರ ಮರಣದ ಕೇವಲ ಒಂದು ವಾರದ ಮುನ್ನ ದೆಹಲಿಯಲ್ಲಿ ಭೇಟಿಯಾಗಿದ್ದರು. ಅವರು ಲೇಡಿ ಮೌಂಟ್ ಬ್ಯಾಟನ್‌ರ ಒಂದು ಚಿತ್ರ ಬರೆಯುವ ಅಪೇಕ್ಷೆಯನ್ನು ಲಾರ್ಡ್ ಮೌಂಟ್ ಬ್ಯಾಟನ್‌ರ ಬಳಿ ವ್ಯಕ್ತಪಡಿಸಿದಾಗ, ಚಿತ್ರ ಬರೆಯಲು ಒಪ್ಪಿಗೆ ನೀಡಿದರು. ಸ್ವಾಮಿಯವರು ಲೇಡಿ ಮೌಂಟ್ ಬ್ಯಾಟನ್‌ರ ಚಿತ್ರವನ್ನು ಸೂಪರಿಂಟೆಂಡೆಂಟರ ಸಮವಸ್ತ್ರಗಳಲ್ಲಿ ಜನತೆಯು ಕಂಡ ರೀತಿಯಲ್ಲೇ ಮತ್ತು ಸಿಂಗಾಪುರದ ಒಂದು ಆಸ್ಪತ್ರೆಯಲ್ಲಿ ರೋಗಿಯಾದ ಗೂರ್ಖಾ ಮಗುವಿನೊಂದಿಗೆ ಮಾತನಾಡುತ್ತಿದ್ದಾಗಿನ ಚಿತ್ರವನ್ನು ವರ್ಣಗಳಿಂದ ಚಿತ್ರಿಸಿದ್ದಾರೆ.

ಆದರೆ ದುರ್ದೈವದಿಂದ ಲೇಡಿ ಮೌಂಟ್ ಬ್ಯಾಟನ್ ಆಕಸ್ಮಿಕವಾಗಿ ಮರಣಕ್ಕೆ ತುತ್ತಾದರು. ಸ್ವಾಮಿಯವರು ತಮ್ಮ ಈ ಕಲಾಕೃತಿಯನ್ನು ಭಾರತದ ಪರವಾಗಿ ಅರ್ಪಿಸಬೇಕೆಂದು ಆಗಿನ ಪ್ರಧಾನ ಮಂತ್ರಿ ನೆಹರೂ ಅವರನ್ನು ವಿನಂತಿಸಿಕೊಂಡರು. ನೆಹರೂರವರು ಈ ವಿನಂತಿಯನ್ನು ಒಪ್ಪಿ ಭಾರತದ ಪರವಾಗಿ ಲಂಡನ್ ನಗರದ ಪುರಸಭೆಗೆ ಅರ್ಪಿಸಿದರು. ಲಂಡನ್ನಿನ ಪುರಸಭೆಯಲ್ಲಿ ನಡೆದ ಸಮಾರಂಭದಲ್ಲಿ ಲಾರ್ಡ್‌ಮೌಂಟ್‌ಬ್ಯಾಟನ್ ಅವರು ಅನಾವರಣ ಮಾಡಿದರು. ಲಂಡನ್ ನಗರದ ಡೆಪ್ಯೂಟಿ ಮೇಯರ್






ರವೀಂದ್ರನಾಥ ಠಾಗೋರ್ Ravindranath Tagore



ಲಕ್ಷ್ಮೀನರಸಿಂಹ ದೇವಸ್ಥಾನ – ಗರುಡ

Garuda of Laxminarayana Temple




ಜಿ. ಬಾರ್ನಡ್ ಷಾ

George Bernard Shaw



ಇಂದಿರಾಗಾಂಧಿ ತಮ್ಮ ತಾಯಿ ಚಿತ್ರವನ್ನು ವೀಕ್ಷಿಸುತ್ತಿರುವುದು Indira Gandhi watching her mother's Painting



ಸಿ. ವಿ. ರಾಮನ್ C. V. Raman



ಜಾರ್ಜ್F. ಎಲ್

George .L



ನೆಹರೂ ಮತ್ತು ಇಂದಿರಾಗಾಂಧಿಯವರೊಡನೆ S. N. Swamy with Pandit Nehru and Indira Gandhi

ಈ ಕಲಾಕೃತಿಯ ಬಗ್ಗೆ "ಈ ತೈಲಚಿತ್ರವು ಲೇಡಿ ಮೌಂಟ್ ಬ್ಯಾಟನ್‌ರ ಸುಂದರ ಹಾಗೂ ಚಿರಸ್ಮರಣೀಯವಾದ ಸಂಸ್ಮರಣೆಯಾಗಿ ಉಳಿಯುವುದು" ಎಂದಿದ್ದು, ಈ ಸಮಾರಂಭದಲ್ಲಿ ನೆರೆದವರೆಲ್ಲರೂ ಈ ಕಲಾಕೃತಿಯನ್ನು ಮನಸಾರೆ ಪ್ರಶಂಸೆ ಮಾಡಿದರು.

ಪ್ರಧಾನ ಮಂತ್ರಿಗಳಾಗಿದ್ದ ನೆಹರು 1957ರ ಸೆಪ್ಟೆಂಬರ್ ತಿಂಗಳಿನಲ್ಲಿ ಮೈಸೂರಿನಿಂದ ದೆಹಲಿಗೆ ಮರಳಲು ಮಂಡಕ್ಕಿ ವಿಮಾನ ನಿಲ್ದಾಣಕ್ಕೆ ಬಂದಾಗ, ಸ್ವಾಮಿಯವರು ತಾವು ಬರೆದಿದ್ದ ಶ್ರೀಮತಿ ಕಮಲಾ ನೆಹರೂ ಚಿತ್ರವನ್ನು ತೋರಿಸಿದಾಗ ತಮ್ಮ ವೈವಾಹಿಕ ಜೀವನದ ನೆನಪು, ಗತಕಾಲದ ಗುರುತುಗಳನ್ನು ಸ್ಮರಿಸುವ ಆ ಚಿತ್ರವನ್ನು ಪ್ರಧಾನಿಯವರು ಒಂದಷ್ಟು ಹೊತ್ತು ಪರಿಶೀಲಿಸಿದರು. ಸ್ವಾಮಿಯವರು ಕಮಲಾನೆಹರು ಅವರ ಉಡುಗೆ ತೊಡುಗೆಗಳ ಬಗ್ಗೆ ವಿವರ ನೀಡಬೇಕೆಂದು ವಿನಂತಿಸಿದರು. ಕಮಲಾ ನೆಹರೂ ಅವರ ಬಗ್ಗೆ ಹೆಚ್ಚು ವಿವರಗಳನ್ನು ಇಂದಿರಾಗಾಂಧಿಯವರಿಂದ ಪಡೆಯುವಂತೆ ಸಲಹೆ ನೀಡಿದರು. ಅದರಂತೆ ಇಂದಿರಾಗಾಂಧಿಯರು ನಜರಾಬಾದ್‌ನಲ್ಲಿದ್ದ ಸ್ವಾಮಿಯವರ ಮನೆಗೆ ಬಂದು, ತಮ್ಮ ತಾಯಿಯವರು ಧರಿಸುತ್ತಿದ್ದ ವಸ್ತ್ರ, ಒಡವೆಗಳನ್ನು ತಂದು ತೋರಿಸಿ, ಕಮಲ ನೆಹರು ಅವರ ಮುಖ ಲಕ್ಷಣಗಳನ್ನು ವಿವರಿಸಿದರು. ಕಮಲಾ ನೆಹರು ಅವರ ಭಾವಪೂರ್ಣವಾದ ಚಿತ್ರವನ್ನು ಸ್ವಾಮಿಯವರು ರಚಿಸಿ, ನೆಹರು ಅವರಿಗೆ ಅರ್ಪಿಸಿದರು.

ಇಂದಿರಾಗಾಂಧಿ ಮೈಸೂರು ನಗರಕ್ಕೆ ಭೇಟಿ ನೀಡಿದಾಗಲೆಲ್ಲಾ, ಸ್ವಾಮಿಯವರ ಭೇಟಿಯಾಗುತ್ತಿತ್ತು. ಈ ಭೇಟಿಯಿಂದ ಸ್ವಾಮಿಯವರು ನೆಹರು ಕುಟುಂಬಕ್ಕೆ ನಿಕಟವರ್ತಿಗಳಾಗಿದ್ದರು ಎಂದರೆ ತಪ್ಪಾಗಲಾರದು. ಪ್ರಧಾನಿ ನೆಹರು ಅವರು ತೈಲಚಿತ್ರವನ್ನು ರಚಿಸಿಕೊಟ್ಟಿದ್ದು ಅದು ಈಗ ತೀನ್ ಮೂರ್ತಿ ಭವನದಲ್ಲಿದೆ.

ಸ್ವಾಮಿಯವರು ಯುದ್ಧದ ಸಮಯದಲ್ಲೂ , ಅಂಚೆ ಅಡಚಣೆಗಳಿಲ್ಲದಂತೆ ಭಾವಚಿತ್ರಗಳನ್ನು ತರಿಸಿಕೊಳ್ಳುವುದೂ, ಇವರು ರಚಿಸಿದ ಭಾವಚಿತ್ರಗಳನ್ನು ಸಹಿಗಾಗಿ ಕಳುಹಿಸಿ ಕೊಡುತ್ತಿದ್ದರು. ಈ ಪ್ರಕರಣದಲ್ಲಿ ಹಿಟ್ಲರ್ ಚಿತ್ರ ವಿಶೇಷವಾದುದು. ಸ್ವಾಮಿಯವರು ತಾವು ರಚಿಸಿದ ಹಿಟ್ಲರ್ ಚಿತ್ರಕ್ಕೆ ಸಹಿ ಹಾಕುವಂತೆ ಚಿತ್ರ ಕಳುಹಿಸಿದ್ದರು. ಹಿಟ್ಲರ್‌ನು 'ನಾನು ಯಾವ ಚಿತ್ರಕ್ಕೂ ಸಹಿ ಹಾಕುವುದಿಲ್ಲ' ವೆಂದು ತಿಳಿಸಿ ಸ್ವಾಮಿಯವರಿಗೆ ಪತ್ರ ಬರೆದ.

ಸ್ವಾಮಿಯವರು ಪುನಃ 'ನೀನು ಚಿತ್ರಕ್ಕೆ ಸಹಿ ಮಾಡುವುದಿಲ್ಲವೆಂದ ಮೇಲೆ ನನ್ನ ಚಿತ್ರ ಹಿಂದಿರುಗಿ ಕಳುಹಿಸುವುದು' ಎಂದು ಪತ್ರ ಬರೆದರು. ಹಿಟ್ಲರ್ ಮಹಾಶಯ ಪರಿವರ್ತನೆ ಹೊಂದಿ, ಈ ಬಾರಿ ತನ್ನ ಛಾಯಾಚಿತ್ರ ಕಳುಹಿಸಿ, ಇನ್ನೊಂದು ಚಿತ್ರವನ್ನು ಬರೆದು ಕಳುಹಿಸುವಂತೆ ಕೇಳಿದ. ಸ್ವಾಮಿಯವರು ಇನ್ನೊಂದು ಚಿತ್ರವನ್ನೂ ಬರೆದು ಕಳುಹಿಸಿದಾಗ, ಹಿಟ್ಲರ್ ಆ ಚಿತ್ರಕ್ಕೆ ಸಹಿ ಮಾಡಿ ಕಳುಹಿಸಿದ. ವಿಶ್ವದ ಮತ್ತು ರಾಷ್ಟ್ರದ ಅನೇಕ ಪ್ರಮುಖ ಪತ್ರಗಳು ಮತ್ತು ಚಿತ್ರಗಳು ಇಂದು ಸ್ವಾಮಿಯವರ ಮನೆಯಲ್ಲಿ ಇಂದಿಗೂ ನೋಡಬಹುದು.

ರೇಖಾ ಚಿತ್ರಗಳು

ಸ್ವಾಮಿಯವರು ಕಲೆಯ ಬಗ್ಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಮತ್ತು ಆಕಾಶವಾಣಿಯಲ್ಲಿ ಕಲೆಯ ಬಗ್ಗೆ ಮಾತನಾಡಿದ್ದಾರೆ. ಅಲ್ಲದೆ 'ಟೆಂಪಲ್ ಸ್ಕಲ್ಪ್‌ಚರ್ ಆಫ್ ಇಂಡಿಯಾ', 'ಪ್ರಿಯದರ್ಶಿನಿ' ಮತ್ತು 'ಮೆಸೆಂಜರ್ ಆಫ್ ಪೀಸ್' ಎಂಬ ರೇಖಾಚಿತ್ರಗಳಿರುವ ಪುಸ್ತಕಗಳು ಪ್ರಕಟವಾಗಿವೆ. ಈ ಪುಸ್ತಕಗಳಲ್ಲಿ 'ಟೆಂಪಲ್ ಸ್ಕಲ್ಪ್‌ಚರ್ ಆಫ್ ಇಂಡಿಯಾ ಪುಸ್ತಕವನ್ನು ರಾಜ್ಯ ಲಲಿತಕಲಾ ಅಕಾಡೆಮಿಯು 1971ರಲ್ಲಿ ಪ್ರಕಟಿಸಿದ್ದು, ಉತ್ತಮವಾದ ಮುದ್ರಣದೊಂದಿಗೆ ರೇಖಾ ಚಿತ್ರಗಳು ಮುದ್ರಿತವಾಗಿವೆ. ಕಲಾವಿದ ಸ್ವಾಮಿಯವರು ನಮ್ಮ ದೇಶದ ಪ್ರಮುಖ ಸಾಂಚಿಯ ಭೋಧಿಸತ್ವ ಸ್ತೂಪ, ದಕ್ಷಿಣದ ಬಾಗಿಲು, ಸಾರನಾಥದ ಭೋಧಿಸುತ್ತಿರುವ ಬುದ್ಧ, ಅಶೋಕಸ್ತಂಭ, ಕೋನಾರ್ಕ್‌ನ ಸೂರ್ಯ ದೇವಾಲಯ, ಮಥುರಾದ ನಿರೀಕ್ಷೆಯ ಮಹಿಳೆ, ಭುವನೇಶ್ವರದ ತಾಯಿ ಮತ್ತು ಮಗು, ಕನ್ನಡಿ ನೋಡಿ ಕೊಳ್ಳುತ್ತಿರುವ ಮಹಿಳೆ, ಪ್ರೇಮ ಪತ್ರ ಬರೆಯುತ್ತಿರುವ ಮಹಿಳೆ, ಎಲಿಫೆಂಟಾ ಗುಹೆ ಮತ್ತು ಶಿವ, ಖಜರಾಹೋವಿನ ಕೊಳಲುವಾದಕ, ಐಹೊಳೆಯ ಲಡಕಾನ್ ದೇವಾಲಯ, ಬಾದಾಮಿಯ ಗುಹೆಗಳು,ದಕ್ಷಿಣ ಭಾರತದ ಶಿವನಟರಾಜ ಮತ್ತು ಬೇಲೂರು, ಹಳೇಬೀಡು, ದೇವಸ್ಥಾನಗಳಲ್ಲಿನ ಶಿಲ್ಪಗಳನ್ನು ತಮ್ಮ ರೇಖಾಚಿತ್ರಗಳ ಮೂಲಕ ಚಿತ್ರಿಸಿದ್ದು, ಅವುಗಳ ಲಯ, ಭಾವಗಳನ್ನು, ಪೆನ್ಸಿಲ್‌ನಿಂದ 32 ಚಿತ್ರಗಳನ್ನು, ಪುಸ್ತಕದಲ್ಲಿ ದಾಖಲಿಸಿದ್ದಾರೆ. ರಾಷ್ಟ್ರಪತಿಗಳಾಗಿದ್ದ ಡಾ।। ಎಸ್. ರಾಧಾಕೃಷ್ಣನ್ ಅವರು ಈ ಪುಸ್ತಕಕ್ಕೆ ಕೆಳಕಂಡಂತೆ ಮೆಚ್ಚುಗೆ ಸೂಚಿಸಿದ್ದಾರೆ.

"ನನಗೆ ಅನೇಕ ವರ್ಷಗಳಿಂದಲೂ ಮೈಸೂರಿನ ಎಸ್.ಎನ್. ಸ್ವಾಮಿಯವರ ಪರಿಚಯವಿದೆ ಮತ್ತು ಕಲಾವಿದನಾಗಿ ನಾನು ಅವರ ಕೌಶಲ್ಯವನ್ನು ಮೆಚ್ಚುತ್ತೇನೆ. ಭಾರತದ ದೇವಾಲಯಗಳ ಹಲವು ಗಮನಾರ್ಹ ಶಿಲ್ಪಗಳ ಈ ಪೆನ್ಸಿಲ್ ರೇಖಾಚಿತ್ರಗಳು - ಪ್ರಾಚೀನ ಶಿಲ್ಪಿಗಳು ಸಾಧಿಸಿದ ಉತ್ಕೃಷ್ಟತೆಯ ಮಟ್ಟದ ಬಗ್ಗೆ ನಮಗೊಂದು ಕಲ್ಪನೆಯನ್ನು ಮೂಡಿಸುತ್ತದೆ. ಅವು ಈ ಶ್ರೇಷ್ಠ ದೇವಾಲಯಗಳನ್ನು ಸಂದರ್ಶಿಸಲು ನಮ್ಮನ್ನು ಆಹ್ವಾನಿಸುತ್ತದೆ."

ದಿ ಮೆಸೆಂಜರ್ ಆಫ್ ಫೀಸ್

ಈ ಪುಸ್ತಕವನ್ನು ಮೈಸೂರಿನ ಗೀತಾ ಪ್ರಕಾಶನ ಸಂಸ್ಥೆಯವರು 1981ರಲ್ಲಿ ಪ್ರಕಟಿಸಿದ್ದು, ಪ್ರಧಾನಮಂತ್ರಿಗಳಾಗಿದ್ದ ಇಂದಿರಾಗಾಂಧಿಯವರು ಅಂತರರಾಷ್ಟ್ರೀಯ ಮತ್ತು ರಾಷ್ಟ್ರದ ಪ್ರಮುಖ ವ್ಯಕ್ತಿಗಳಾದ ಶ್ರೀ ಚಂದ್ರಶೇಖರ ಸರಸ್ವತಿ, ಗಾಂಧಿ, ಪಂಡಿತ ನೆಹರು ಅವರೊಡನಿದ್ದು, ಶಾಂತಿಯ ಸಂಕೇತವಾಗಿ ಪಾರಿವಾಳಗಳನ್ನು ಉಪಯೋಗಿಸಿದ್ದಾರೆ. ನೆಹರು, ಸಂಜಯಗಾಂಧಿ, ರಾಜೀವಗಾಂಧಿಯವರೊಡನೆ, ಗಾಂಧಿಯೊಡನೆ, ಫಿರೋಜಾ ಗಾಂಧಿಯವರೊಡನೆ, ಮದುವೆಯ ದೃಶ್ಯ ರವೀಂದ್ರನಾಥ ಟಾಗೂರ್ ಅವರೊಡನೆ, ರಾಧಾ ಕೃಷ್ಣನ್ ಅವರೊಡನೆ-ಬುದ್ಧನ ಪ್ರತಿಮೆ ಮತ್ತು ಪಾರಿವಾಳವಿದೆ. ಲಾಲ್ ಬಹದ್ದೂರ್ ಶಾಸ್ತ್ರಿ ಮುಂತಾದ ಪ್ರಮುಖರೊಡನಿರುವ 65 ರೇಖಾಚಿತ್ರಗಳನ್ನು ರಚಿಸಿದ್ದು, ಇಂದಿರಾ ಗಾಂಧಿಯವರನ್ನು ಶಾಂತಿ ದೂತೆಯನ್ನಾಗಿ ಚಿತ್ರಿಸಿದ್ದಾರೆ. ಈ ಪುಸ್ತಕ 'ಪ್ರಿಯದರ್ಶಿನಿ' ಪುಸ್ತಕದ ಪ್ರತಿ ರೂಪವಾಗಿದ್ದು, ಕೆಲವು ರೇಖಾಚಿತ್ರಗಳನ್ನು ಸೇರಿಸಿ, ಮುದ್ರಿಸಲಾಗಿದೆ.

ಪ್ರಿಯದರ್ಶಿನಿ

ಈ ಪುಸ್ತಕವನ್ನು 1973ರಲ್ಲಿ ರಾಜ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯವರು ಪ್ರಕಟಿಸಿದ್ದು, ಇಂದಿರಾಗಾಂಧಿಯವರ ವ್ಯಕ್ತಿತ್ವದ ಪರಿಚಯ, ಭಾವಪೂರ್ಣ ಅಭಿವ್ಯಕ್ತಿ ಹಾಗೂ ಪ್ರಮುಖ ವ್ಯಕ್ತಿಗಳೊಡನೆ ಇರುವ ಸುಮಾರು 50 ರೇಖಾಚಿತ್ರಗಳನ್ನು ಕಾಣಬಹುದು. ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ದೇವರಾಜ ಅರಸು ಅವರು "ಕಲಾವಿದ ಸ್ವಾಮಿಯವರು

ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರ ಭಾವಚಿತ್ರ ಮತ್ತು ರೇಖಾಚಿತ್ರಗಳನ್ನು ರಚಿಸಿರುವ ಈ ಪುಸ್ತಕ ಇಂದಿರಾ ಗಾಂಧಿಯವರ ರಾಜಕೀಯ ಬಹುಮುಖ ವ್ಯಕ್ತಿತ್ವವನ್ನು ತೋರಿಸುವುದಲ್ಲದೆ, ಬದಲಾದ ಸಮಾಜದಲ್ಲಿ ಆಕೆಯ ನಾಯಕತ್ವ ವಿಶ್ವವ್ಯಾಪಿಯಾಗಿದೆ. ಸ್ವಾಮಿಯವರನ್ನು ನಾನು ಅನೇಕ ವರ್ಷಗಳಿಂದ ಬಲ್ಲೆ. ಅಂತಹವರು ಭಾರತದ ಬೆಳ್ಳಿಹಬ್ಬದ ಸ್ವಾತಂತ್ರ್ಯದ ಈ ಸಂದರ್ಭದಲ್ಲಿ ಸ್ವಾಮಿಯವರ ಪುಸ್ತಕ ಪ್ರಕಟವಾಗುತ್ತಿರುವುದು ಸಂತೋಷದ ವಿಷಯ'' ಎಂದು ಪುಸ್ತಕದಲ್ಲಿ ಮುನ್ನುಡಿ ಬರೆದಿದ್ದಾರೆ.

ಸ್ವಾಮಿಯವರಿಗೆ ಕೆಲವು ವ್ಯಕ್ತಿಗಳ ಬಗ್ಗೆ ವಿಶೇಷ ಒಲವಿದ್ದಂತೆ ಕಾಣುತ್ತದೆ. ಅವರು ಒಬ್ಬ ವ್ಯಕ್ತಿಯ ಬಗ್ಗೆ ಅನೇಕ ರೇಖಾಚಿತ್ರಗಳನ್ನು ರಚಿಸಿದ್ದಾರೆ. ಅಂದರೆ ಒಬ್ಬ ವ್ಯಕ್ತಿಯ ಬಗ್ಗೆ ವಿವಿಧ ವರ್ಷಗಳಲ್ಲಿ ರಚಿಸಿರುವ ಈ ರೇಖಾಚಿತ್ರಗಳಲ್ಲಿ ಅವರ ಬೆಳವಣಿಗೆ, ಭಾವನೆಗಳನ್ನು ತಿಳಿಯಬಹುದು. ಉದಾಹರಣೆಗೆ ನೆಹರು ಅವರ ಬಗ್ಗೆ 1947 ರಲ್ಲಿ ರಚಿಸಿದ ಚಿತ್ರದಲ್ಲಿ ಇನ್ನೂ ಯೌವನದ ಚಿಂತನೆಗಳು, 1949ರಲ್ಲಿ ನೆಹರು ಅವರನ್ನು ವರ್ಣದ ಪೇಸ್ಟಲ್‌ನಲ್ಲಿ ರಚಿಸಿದ್ದು, ಬಹುಶಃ ಅವರು ವರ್ಣದ ಪೇಸ್ಟಲ್ ಉಪಯೋಗಿಸಿ ರಚಿಸಿರುವ ಚಿತ್ರದಲ್ಲಿ ಇದೊಂದು ಅಪರೂಪದ ರೇಖಾಚಿತ್ರಗವಾಗಿದೆ. 1952ರಲ್ಲಿ ನೆಹರು ಸೂಟೂ ಧರಿಸಿದ್ದರೇ, ಕೆಲವು ರೇಖಾಚಿತ್ರಗಳಲ್ಲಿ ನಗುಮುಖ ಹಾಗೂ ಯೋಚನಾ ಮಗ್ನರಾಗಿರುವಂತೆ ಚಿತ್ರಿಸಿದ್ದು, ಅವರ ವಿವಿಧ ವಯಸ್ಸಿನಲ್ಲಿ, ಆ ವಯಸ್ಸಿನ ಭಾವಗಳನ್ನು ಚಿತ್ರಿಸಿ, ಎಲ್ಲಾ ಚಿತ್ರಗಳಿಗೂ ನೆಹರೂ ಅವರ ಹಸ್ತಾಕ್ಷರ ಪಡೆದಿದ್ದಾರೆ.

ಗಾಂಧಿಯ ಬಗ್ಗೆ ಅನೇಕ ರೇಖಾಚಿತ್ರಗಳನ್ನು ರಚಿಸಿದ್ದು, ಚಿತ್ರಗಳಲ್ಲಿ ಚಿಂತನೆ, ಇಡೀ ರಾಷ್ಟ್ರದ ಬಗ್ಗೆ ಯೋಚನಾ ಮಗ್ನರಾಗಿರುವುದು, ಮುಖದ ಮೇಲಿನ ಭಾವನೆಗಳು ಪ್ರಧಾನವಾಗಿವೆ. 1953ರಲ್ಲಿ ಕನ್ನಡದ ಪಿತಾಮಹಾ ಆಲೂರು ವೆಂಕಟರಾಯರ ರೇಖಾಚಿತ್ರಗಳಲ್ಲಿ ಅವರ ವ್ಯಕ್ತಿತ್ವ ವಿಚಾರ ಗ್ರಹಣ; ಸರ್ ಎಂ. ವಿಶ್ವೇಶ್ವರಯ್ಯನವರ ವಿವಿಧ ಆಲೋಚನೆಯ ಮುಖಗಳು - ಹೀಗೆ ಅನೇಕ ಅಂತರ ಮತ್ತು ರಾಷ್ಟ್ರದ ಜನಪ್ರಿಯ ವ್ಯಕ್ತಿಗಳ ಬಗ್ಗೆ ಅಸಂಖ್ಯಾತ ರೇಖಾಚಿತ್ರಗಳನ್ನು ರಚಿಸಿ, ಅವರಿಂದ ಹಸ್ತಾಕ್ಷರ ಪಡೆದಿದ್ದು, ಅವು ಇಂದು ನಮಗೆ ರಾಷ್ಟ್ರೀಯ ದಾಖಲೆಗಳಾಗಿವೆ.

ಸ್ವಾಮಿಯವರು ರೇಖಾಚಿತ್ರ ರಚಿಸಿರುವುದನ್ನು ಬಿಟ್ಟರೆ, ಕೆಲವೊಮ್ಮೆ ತೈಲವರ್ಣದಲ್ಲಿ ಭಾವಚಿತ್ರ ಮತ್ತು ಪೂರ್ಣಾಕೃತಿಯ ಚಿತ್ರಗಳನ್ನು ರಚಿಸಿದ್ದಾರೆ. ನೆಹರು, ಗಾಂಧಿ, ಬಾಬು ರಾಜೇಂದ್ರ ಪ್ರಸಾದ್, ಪರಮಹಂಸ, ಜಪಾನಿನ ಪ್ರದಾನಿ ಸ್ಯಾಟೋ, ವಿಲಿಬ್ರಾಂಡ್, ಲೋಹಿಯಾ ಮುಂತಾದವರ ಬಗ್ಗೆ ತೈಲಚಿತ್ರಗಳನ್ನು ರಚಿಸಿದ್ದು, ಅವುಗಳಲ್ಲಿ ಅವರ ವ್ಯಕ್ತಿತ್ವ ವರ್ಣಸಂಯೋಜನೆ, ಭಾವನೆಗಳನ್ನು ವಾಸ್ತವಿಕವಾಗಿ ಚಿತ್ರಿಸಿದ್ದಾರೆ.

ಸಂಘಸಂಸ್ಥೆಗಳೊಡನೆ

ಸ್ವಾಮಿಯವರು ರಾಷ್ಟ್ರದ ಹಾಗೂ ರಾಜ್ಯದ ಅಕಾಡೆಮಿಗಳೊಡನೆ ನಿಕಟ ಸಂಪರ್ಕ ಪಡೆದಿದ್ದು, ಕಲಾಸೇವೆ ಮಾಡಿದ್ದಾರೆ. 1958ರಲ್ಲಿ ಸಾಂಸ್ಕೃತಿಕ ಪ್ರತಿನಿಧಿಯಾಗಿ ರಷ್ಯಾಗೆ ಭೇಟಿ ಕೊಟ್ಟಿದ್ದರು. 1967ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿ ಹಾಗೂ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ರಾಜ್ಯ ಲಲಿತಕಲಾ ಅಕಾಡೆಮಿಯು ಅವರು ಕಲೆಗೆ ಸಲ್ಲಿಸಿರುವ ಸೇವೆಗಾಗಿ 1966ರಲ್ಲಿ ಅಕಾಡೆಮಿಯು ಪ್ರಶಸ್ತಿಯನ್ನು ನೀಡಿ ಗೌರವಿಸಿದಾಗ, ಅವರ ಬಗ್ಗೆ "ಭಾರತ ಭಾಗ್ಯವಿಧಾತ - ಮಹಾತ್ಮ ಗಾಂಧಿಯವರನ್ನು ಎದುರಿಗೆ ಕೂರಿಸಿಕೊಂಡು ಚಿತ್ರ ರಚಿಸುವ ಮಹಾ ಸೌಭಾಗ್ಯವನ್ನು ಗಳಿಸಿ, ವಿಶ್ವವಿಖ್ಯಾತರುಗಳಿಂದ ಸೈ ಅನ್ನಿಸಿಕೊಂಡಿರುವ ಮೈಸೂರಿನ ಕಲಾವಿದ ಎಸ್.ಎನ್. ಸ್ವಾಮಿಯವರು ದೇಶ ವಿದೇಶಗಳಲ್ಲಿಯೂ ಪ್ರಖ್ಯಾತರಾಗಿದ್ದಾರೆ.

ರೂಪ ರಚನೆಯಲ್ಲಿ ಸ್ವಾಮಿಗಳು ಹೆಸರಾದಂತೆ ರೇಖಾಚಿತ್ರಣದಲ್ಲೂ ಹೆಸರಾಗಿದ್ದು ಬಹು ಜನರ ಪ್ರೀತಿಗೆ ಪಾತ್ರರಾಗಿದ್ದರು. ಅದ್ಭುತ ಸಾಮರ್ಥ್ಯದ ಸ್ವಾಮಿಯವರ ಕೃತಿಗಳಲ್ಲಿ ಜೀವಕಳೆ ತುಂಬಿ ತುಳುಕುತ್ತಿರುತ್ತದೆ. ತಮ್ಮ ಅಪೂರ್ವ ಕಲಾ ಸೃಷ್ಟಿಗಳಿಂದ ಕರ್ನಾಟಕಕ್ಕೆ ಹೆಸರು ತಂದು ಕೊಟ್ಟಿದ್ದಾರೆ" ಎಂದು ಪ್ರಶಂಸಿಸಿ, ಗೌರವಿಸಿದೆ.

ಸ್ವಾಮಿಯವರ ಕಲಾಸಾಧನೆಯನ್ನು ಗುರ್ತಿಸಿ, ಭಾರತ ಸರ್ಕಾರವು 1969 ರಲ್ಲಿ 'ಪದ್ಮಶ್ರೀ' ಪ್ರಶಸ್ತಿ ನೀಡಿ ಗೌರವಿಸಿತು. ಇದು ಅವರ ಕಲಾಜೀವನದ ಮೈಲಿಗಲ್ಲೆನಿಸಿದೆ. ಅಲ್ಲದೆ 1971 ರಲ್ಲಿ ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಅಧಿಕಾರಕ್ಕೆ ಬಂದಮೇಲೆ ದಸರಾ ಮೆರವಣಿಗೆಯಲ್ಲಿ ಮಹಾರಾಜರ ಬದಲು ಈಗ 'ಭಾರತಮಾತಾ' ವಿಗ್ರಹದ ಮೆರವಣಿಗೆ ಪ್ರಾರಂಭವಾಯಿತು. ಈ ಭಾರತಮಾತಾ ವಿಗ್ರಹವನ್ನು ದಸರಾ ಉತ್ಸವಕ್ಕೆಂದೇ, ಸ್ವಾಮಿಗಳನ್ನು ನಿರ್ಮಿಸಿ ಕೊಡುವಂತೆ ಸರ್ಕಾರ ವಿನಂತಿಸಿತು. ಅದರಂತೆ ಸ್ವಾಮಿಗಳು ಮೆರವಣಿಗೆಗೆ ಸರಿಹೊಂದುವಂತಹ 'ಭಾರತ ಮಾತಾ' ವಿಗ್ರಹ ರಚಿಸಿಕೊಟ್ಟಿದ್ದು, ಇಂದಿಗೂ ವಿಗ್ರಹವನ್ನು ನೋಡಿದಾಗಲ್ಲೆಲ್ಲಾ ಸ್ವಾಮಿಯವರ ನೆನಪು ಬರುತ್ತದೆ.

ಸ್ವಾಮಿಯವರು ತಾವು ಬಿಡಿಸಿದ ಅನೇಕ ರೇಖಾ ಚಿತ್ರಗಳ (ಸ್ಕೆಚ್ ಪುಸ್ತಕ) ಪುಸ್ತಕಗಳನ್ನು ಮತ್ತು ತಾವು ಉಪಯೋಗಿಸುತ್ತಿದ್ದ ಕಲಾಪರಿಕರಗಳನ್ನು ಮೈಸೂರಿನಲ್ಲಿರುವ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಗೆ ಕಾಣಿಕೆಯಾಗಿ ಅವರ ಮಕ್ಕಳು ನೀಡಿದ್ದಾರೆ. ಅಲ್ಲದೆ ಇಲ್ಲೇ ಗಾಂಧೀಜಿಯವರ ಭಾವಪೂರ್ಣವಾದ ತೈಲವರ್ಣ ಚಿತ್ರವನ್ನು ಅಲೋಕಾದಲ್ಲಿರುವ ಕಾವಾದಲ್ಲಿ ಕಾಣಬಹುದು.

ತಮ್ಮ ಇಡೀ ಜೀವನವನ್ನು ಕಲೆಗಾಗಿಯೇ ಮೀಸಲಿಟ್ಟಿದ್ದ ಸ್ವಾಮಿಯವರು 1983 ರಲ್ಲಿ ನಿಧನರಾದರು. ಅವರು ನಿಧನರಾದರೂ ಅವರ ಕಲೆ ಶಾಶ್ವತವಾದುದು. ಅವರು ರಚಿಸಿರುವ ಎಲ್ಲಾ ರೇಖಾಚಿತ್ರಗಳನ್ನು ಇಂದಿಗೂ ಅವರ ಮನೆಯಲ್ಲಿ ನೋಡಬಹುದು. ಆದರೆ ದುಃಖದ ಸಂಗತಿಯೆಂದರೆ, ಅವುಗಳನ್ನು ಸಂರಕ್ಷಿಸಲು ನಮ್ಮಿಂದ ಸಾಧ್ಯವಾಗುತ್ತಿಲ್ಲ . ಇಷ್ಟರಲ್ಲೇ ಬಹುಮುಖ್ಯವಾದ ರೇಖಾ ಚಿತ್ರಗಳು ಲಂಡನ್ ನಗರದಲ್ಲಿ ಕಲಾಭಿಮಾನಿಗಳ ಸಂಗ್ರಹಕ್ಕೆ ಮಾರಾಟವಾಗಿ ಹೋಗುತ್ತಿದೆ. ಇದು ನಮಗೆ ದುಃಖದ ಸಂಗತಿಯಾದರೂ, ಇಲ್ಲಿ ಸಲ್ಲದ ರೇಖಾ ಚಿತ್ರಗಳು ಅಲ್ಲಿ ಕಲಾಭಿಮಾನಿಗಳಿಗೆ ಸಲ್ಲುತ್ತಿದೆ.

"ಸ್ವಾಮಿಯವರ ಚಿತ್ರದಮೇಲೆ ಗಾಂಧೀಜಿ ನಿಜವಾದ ಕಲೆ ಅಮರ ಎಂದು ಬರೆದಿದ್ದಾರೆ."

S. N. SWAMY

Artist S.N.Swamy has achieved success through his drawings and sketches. In Swamy's sketches one could easily see an astonishing rendering of different feelings with skill.

Singannacharya Narasimha Swamy is famous though his portrait painting. He was born in 1911 in Mysore to a sculptor and a gold medalist Singannacharya and Thayamma. His family environment was full of artists and was brought up in very congenial atmosphere of art that helped him to involve himself with the art. His father Singannacharya used to go to Mysore Palace to undertake varieties of art works required by the Palace. He often used to take with him young Swamy to the Palace. In the Palace whenever his father was sculpting various art works like throne, howdah and many idols, Swamy was keenly observing the technique of engraving. This observation led

Bombay in 1930 for higher studies in Art and he spent money on Swamy's art education. Whenever the King happened to be in Bombay, he used to call Swamy and encourage him to continue the good job, giving him enough money.

SWAMY AT BOMBAY

Swamy was a devoted student of eminent art teacher Purandhar at Sir J.J.School of Arts. He had the academic art style of education in this institution. To draw a portrait of a person, close contact with that person is necessary. This was necessary to bring out the much needed characteristics in the portrait. He also used to study the naturality of a fact and mind. This was reflected in his portrait paintings in good measure. One can see these qualities in Swamy's portraits. He achieved fame in paintings through innumerable portraits.

In Swamy's oil colour paintings one can easily notice the presence of good technique of colour combination and the perception of situations. He chooses the blend of tradition with day to day life.

During Swamy's stay at Bombay, well known artists like Sir Desai, Haldhankar, Sithawar, Karmarkar used to meet every Sunday and discuss various matters connected with art and culture. As a member of this group, Swamy used to observe A.X.Tendod, who was making portraits. This helped Swamy to develop himself as a distinguished artist. Mr.Tendod gave many suggestions and guidance to Swamy in his work of art. All this naturally made Swamy to develop individual style marked for fine representation of feelings in the visual media.

In Maharashtra, Swamy chose a woman as his model and painted a number of portraits. He titled the

series "My Model". This was sent to Simla Art Exhibition and won him the gold medal. During this period, an artist friend of Swamy, by name Mac Millan, requested Swamy to introduce his model to him. Swamy introduced his model to him and the friend disappeared. Sometime later, painting of Mac Millan based on "My Model" got the award. To celebrate the event friends of Mac Millan had organised a party at Hotel Taj Mahal. Swamy had the invitation to attend the party. During the dinner Mac Millan announced that whatever the distinction conferred on him (Mac Millan) that should actually go to Swamy. He said it is because of Swamy he could do a good job. In Dussera Art Exhibition Swamy's "My Model" series won the S.B.Shastry Memorial Award. As the days went by, Swamy made it almost a habit to go to Chor Bazar area in Bombay and draw plenty of sketches on the life scene at Chor Bazar area.

Though drawing is independent in its own merit, it has gained better dimensions in the hands of artists like Swamy. Swamy opens a new era in the field of drawings and creates yet another new vision of expression. This could be termed as individualistic approach. Every line has life in Swamy's drawings. His works on Chor Bazar drawing and painting could be cited as excellent examples for this impression. Every picture tells us the story of reality and is a reflection of the life. Swamy's studies in Belur and Halebeed has brought out very valuable drawings. His shilabalikas are noted for fine expression of human feelings and many facets of beauty. Swamy showed some of his works of sketches on Belur and Halebeed to his mentor Sri Purandhar who advised Swamy to make some fast sketches. Obediently Swamy followed the guidelines of Sri Purandhar. This

won him a prestigeous award at an Art Exhibition held at Madras. If one wants to analyse the simplicity of Swamy it is necessary to make a study of his life and work during his stay with Sir Desai at Bombay.

It is here Swamy got expert guidance through Sir Desai to become a great master. The encouragement given by Sir Desai deserves special mention. During his stay with Sir Desai, Swamy used to visit the studio of Augusker who is noted for portrait painting at Bombay. Augusker used to say if a person does not know how to handle a pencil, how could he then handle the brush. Obviously this statemnt of Augusker is in praise of Swamy's drawings. Swamy used to express his asonishment over the style adopted in Augusker's paintings. Swamy was also influenced by the art works of Augusker. Specially on the use of drawing in painting. After Swamy's return from Bombay to Mysore he worked in Mysore Palace as an artist for several years. He created interesting paintings in Darbar Hall. Among them, the painting which depicts the Royal procession deserves special mention. He also made an oil colour portrait of Sri Krishna Rajendra Wodeyar. Another important painting of Swamy at the Mysore Palace is a panel of Maharaja, body guards and musicians in Royal granduer at Mysore Palace. The atmosphere prevailing at that time, the dress, the ornaments and naturality of the people at the Palace has been depicted with ease and clarity.

After completion of formal training in art education, Swamy decided to devote rest of his life for the sake of art and dedicated himself to work on drawing portraits and line drawings. It is during this period, Swamy was able to develop individuality specially in line drawings and in portrait paintings. His narration of human feelings had distinct quality which was rare both in form and in content. In 1934, Swamy made

a portrait of Rabindranath Tagore based on one of the photographs available to Swamy. He sent this painting to Tagore requesting him to sign and return the painting to him. Tagore returned the painting with his signature and told Swamy that he should make portraits of famous people in the world and get their signature on it. He also blessed Swamy. This made Swamy to work in this direction. The dedicated work of Swamy got him a permanent place in the field of art. Till the end of his life, he continued to paint portraits in oil medium and pencil drawings. To-day, we have a good collection of Swamy's drawings. In this collection, we have many world famous kings, queens, dramatists, writers, scientists, actors and actresses. The light and shade aspects in most of this collection have won high appreciation from the art lovers. It is interesting to note that most of the paintings and drawings of Swamy has the signature of the models. Hundreds and thousands of letters have come to Swamy in praise of his drawings and paintings. Swamy's collection includes good number of photographs of eminent people in the world. Among the line drawings collection available to us to-day includes portraits of Bernard Shaw, Hitler, Chamberlin, Churchill, Einstine, Eliot and Walt Disney deserves special mention. In this series the on lookers could see the individualistic quality of the distinguished personalities which have a natural flow in Swamy's works. Famous English Writer Bernard Shaw has said, "you have done too much justice to an old man like me". Today Swamy's drawing of Bernard Shaw adorne the wall of Indian Embassy in London. Looking at the art works of Swamy, another prominent English writer Willdurant has said, "These beautiful drawings are among the finest that I have ever seen. I rejoice to see that you have not allowed the Debencrate Elements in contemporary European Art to affect your style" in a personal letter

to Swamy. Of the other important paintings seen abroad are drawings of Mahatma Gandhi in UNESCO Building in Prais, Portrait of Einstine in the Indian Embassy in Washington.

Swamy's portraits are known for expression of face and depiction of personality, it is evident in the portraits of India's top ranking personalities like Gandhi, Nehru, Rajendra Prasad, Radhakrishnan, Sir M Visveswaraya, Indira Gandhi and others. Every painting referred here has very delicate lines and makes the viewer to get swept into the world of meaningful expression.

In 1940, Swamy went to Vardha and had an interview with Gandhi. He prostrated before him and placed all his art works for his perusal. Gandhiji viewed every painting and drawing of Swamy with interest and expressed his happiness. He blessed Swamy. Sometime later, Swamy made a portrait of Gandhiji on which Gandhi wrote "true art is immortal" in Gujarathi.

Swamy created a number of paintings and drawings of Gandhiji. Of them, Dr.Radhakrishnan, the then President of India presented one of the Gandhiji's portrait to UNESCO as a gift from India.

When Morarji Desai was the Prime Minister, he got ten life size paintings of Gandhiji done by Swamy for display in important departments of Governments of India. Pandit Nehru also bought one of the paintings of Gandhiji for his guest house. At present, this painting is in Theen Murti Bhavan in Delhi.

Another interesting study in the life of Swamy is the circumstances under which he learnt classical dance. This was when he was making paintings and

drawings of "Madanikas" of Belur and Halebeed. Swamy was very much inspired by looking at 'Shilabalikas' dancing postures. The desire to lean dance was so much in him that it made him to go to the famous dance Jetti Thayamma and seek dance tuition. During this time, Jetti Thayamma was very popular. Having recognised the deep interest of Swamy in learning the art of dance, Jetti Thayamma accepted him as her student. During the courses of his dance studies, one day T.P.Kailasam came to see Jetti Thayamma and prostrating before, he turned towards Swamy who was nearby and said, "O'Swamy, you are blessed, you have the fortunate of learning dance from this grand old lady. If this lady were in London or Paris, they would have made a golden statue of her". This episode has been narrated in the writings of artist P.R.Thippe Swamy. Swamy has the privilege of presenting his dance recitals in the distinguished presence of Nehru, Dr.Radhakrishnan. His dance programmes were also presented in many places including Maharaja College, Mysore

WITH NEHRU FAMILY

At the time of Indian Independence, Jawaharlal Nehru invited Swamy to Delhi to make life size paintings of Lord Mountbatten. Nearly six months time Swamy took to make this painting. Mountbatten had several sittings with Swamy. During the painting under progress, Nehru used to visit and discuss often and about various aspects of painting. This occassion made Swamy and Nehru to come close to each other. Now, this painting is in India Home at London.

Yet another painting, which made Swamy great was the picture of Lady Mountbatten. Swamy met Lady Mountbatten just a week earlier to her death in

Delhi. During this period, Lady Mountbatten was the Superintendent of St.John's Ambulance Brigade at Burma. When Swamy expressed his desire to paint the portrait of Lady Mountbatten with Lord Mountbatten, he readily gave the consent. In this painting, Swamy has depicted Lady Mountbatten in the uniform of Superintendent, as she was always moving in this dress with the people. The scene is Lady Mountbatten speaking to a sick Ghourka child at Singapore hospital. By the time Swamy completed his painting, Lady mountbatten died in an accident. Swamy thought, this painting of Lady Mountbatten should be presented to the people of London as a token of goodwill of India. For this purpose, he requested Prime Minister Pandit Nehru. He appreciated Swamy's thought and presented the painting to the Corporation of the City of London. Lord Mountbatten unveiled the portrait. On this occasion, Deputy Mayor of London said, this oil painting will make us remeber Lady Mountbatten for ever.

In September 1957, Swamy presented a painting of Kamala Nehru to Pandit Nehru at Mandakki airport. This picture made Nehru to recollect his family life. For quite a long time, the Prime Minister was watching this picture. Swamy requested Nehru to give more details about the dress and other things which Kamala Nehru used to wear in her daily life. Nehru told Swamy to get in touch with Indira Gandhi and get the details. As per the wish of Swamy, Indira Gandhi brought all the dresses, ornaments and explained the facial features of Kamala Nehru to Swamy during her visit to Swamy's residence at Nazarbad in Mysore. Sometime later, Swamy completed the portrait of Kamala Nehru and presented it to Nehru. After this incident, whenever Indira Gandhi used to visit Mysore, she made it a

point to meet Swamy without fail at his residence. All these events show that Swamy had close contact with the Nehru family. Even today, we can see Nehru's portrait painted by Swamy in Teen Murti Bhavan


Even during the war period, Swamy had no problem in getting photographs of eminent people and sending his painting abroad. he used to get back the paintings promptly signed by the models. Even Hitler signed and sent the painting of Swamy. However, before signing his portrait by Swamy, he wrote that he will not sign any picture. Swamy wrote back to Hitler saying that he should get back the painting, if no signature is going to be attested on it. This letter changed Hitler's mind and he sent another photograph to Swamy and asked him to draw again. Swamy drew a painting of Hitler and obtained his signature. If anyone visits Swamy's residence at Mysore, even today they could see the paintings of great personalities of the world.

BOOKS ON DRAWING

Swamy has written many articles on art and talked over All India Radio on art subjects. Among the books published so far, 'Temple sculpture of India', 'Priyadarshini' and 'Messenger of Peace' deserves special mention. All these books have interesting drawings of Swamy. In 1979, State Lalitha Kala Academy has published the book titled 'Temples Sculpture of India'. In this book, Swamy has brought out very important drawings of Bhodi Sathva, Ashoka Sthamba, Surya Temple of Konark, Mother and Child sculpture of Bhuvaneshwar, Woman looking into the mirror and a woman writing love letter, Elephanta caves and other prominent sculptures of South India like Shiva, Nataraja and other sculptures of Belur and Halebeed. There are as many as 32 pencil sketches in



ಮಹಾತ್ಮ ಗಾಂಧಿ Mahatma Gandhi



ಐನ್‌ಸ್ಟೈನ್ Einstein




ನಿರೀಕ್ಷೆಯಲ್ಲಿ ಮಹಿಳೆ – ಮಥುರಾ   Waiting lady - Mathura



ಡೇವಿಡ್ ಲೋ David Low




ಹಿಟ್ಲರ್ Hitler



ಅನ್ನಪೂರ್ಣ – ಹಳೇಬೀಡು

Annapurna - Halebidu



ಸ್ವ-ಚಿತ್ರ-ಎಸ್. ಎನ್. ಸ್ವಾಮಿ

Self Portrait - S.N. Swamy



ಟಿ. ಎಸ್. ಇಲಿಯಟ್ T. S. Elliot

this book. Dr.S.Radhakrishnan, the then President of India had expressed his reaction to this book as under. "I know Swamy of Mysore from a long time, I admire his art. His pencil sketches compells attention particularly of Indian temples. His works speak of the mastery of our grand old sculptors. They invite us to visit the exquisite temples".

PRIYADARSHINI

In 1973, State Information and Publicity department published the book of Swamy titled "Priyadharshini". About 50 drawings of Swamy depicting various moods and sentiments of Indira Gandhi is seen in this book. The then Chief Minister Devaraj Urs has said "I know Swamy for a very long time and is the most distinguished artist of this country. It is worthwhile to have a book by Swamy on our leader Indira Gandhi during the silver jubilee celebration of Indian Independence".

THE MESSENGER OF PEACE

Geetha Publishers of Mysore published his book titled "The messenger of peace" in 1981. This book reveals many facets of great Indian leaders through drawing. Swamy has used the pigeon as a messenger of peace in his drawings. The drawings of Sri Chandrashekara Saraswathi, Indira Gandhi, Rajiv and Sanjay Gandhi are found in this book. This book resembles "Priyadharshini" book.

It appears that Swamy has special love for some particular people. He has drawn many drawings of an individual over the years. This aspect of Swamy helps us to understand the development of the art of drawing. The series of drawings on Nehru between 1947 to 49 could be cited as example for this impression. There are many number of drawings,

each duly signed by Nehru himself, which reveals different stages of Nehru's personal life. This holds good for the series of drawings Swamy has done on Gandhiji.

Apart from Swamy's sketches and drawings there are many oil colour portraits and life size paintings of world leaders. Paintings of Rajendra Prasad, Ramakrishna Paramahamsa, Willbrant and Ram Manohar Lohia could be remembered at this instance.

WITH ART INSTITUTIONS

Swamy had the opportunity of working with several prominent art institutions both at State and National level. In 1958 he visited Russia as a cultural Ambassador. In 1967, he was nominated to Central Lalitha Kala Academy and Central Sangeeth Nataka Academy as a member. In 1966 Swamy got State Lalitha Kala Academy award. In the citation given to him the Academy stated that Swamy had the rare privilege of creating on the spot drawings and paintings having highly celebrated persons of the world like M.K.Gandhi, as models. He has won the love and affection of the people of India and the world through his highly artistic drawings. His art works are known for realistic approach and is full of life. He has brought a good name for Karnataka through his rare art works, the citation added.

Recognising the distinguished achievement of Swamy during his lifetime, the Govt. of India has conferred Padmashri award in 1969. This was considered as an important milestone in the life of Swamy. In 1971 he was nominated to the Tourist Development Corporation as Chairman by the Government of Karnataka.

After India became Republic, the world famous Mysore Dussera procession started having the idol of Chamundeshwari in place of the Maharaja. Govt. requested Swamy to create a Chamundeshewari idol specially for the Dussera procession. Swamy gladly accepted the offer and created the idol of Chamundeshwari which was befitting enough for the Cussera procession. Even to this day, idol of Chamundeshwari bring the memories of Swamy. After the death of Swamy his children donated the sketch works and other drawings to Jayachamarajendra Academy of Visual Arts. They have also donated the art materials to the Academy which Swamy used during his life time. Among the donations, Jayachamarajendra Visual Arts Academy includes oil colour painting of M.K.Gandhi.

Swamy who had dedicated his entire life for the sake of art, died in 1983. Though Swamy is no more with us as a person, his art is with us in all its richness and to mark his memories.

Today, we can still find some of his drawings in his residence at Mysore. But unfortunately this is not being preserved by us. As per the latest report, Swamy's important drawings are now being sold away to London Art collectors. Though this is a matter of regret, one should feel happy that the drawings of Swamy is reaching the people, who would appreciate his works better.

'Swamy, You have done too much justice to an old man like me'

-Bernard Shah

-ಟಕ ಲಲಿತ ಕಲಾ ಅಕಾಡೆಮಿ
ಕ್ರಮ ಸಂಖ್ಯೆ..........
ದಿನಾಂಕ..........
ಬೆಂಗಳೂರು

ಅಕಾಡೆಮಿ ಪ್ರಕಟಣೆಗಳು

ಕರ್ನಾಟಕದ ಕಲೆ

ಚಾಲುಕ್ಯ ವಾಸ್ತು ಶಿಲ್ಪ (ಪ್ರತಿಗಳು ಮುಗಿದಿವೆ)
ಡಾ।। ಶಿವರಾಮಕಾರಂತ ರೂ. 10–50

ದೇವಾಲಯದ ಶಿಲ್ಪಗಳು
ಎಸ್. ಎನ್. ಸ್ವಾಮಿ ರೂ. 30–00

ಕರ್ನಾಟಕದ ಕಲಾವಿದರ ಪರಿಚಯಾವಳಿ
ಎಸ್.ಎನ್. ಚಂದ್ರಶೇಖರ್ ರೂ. 35–00

ಕರ್ನಾಟಕದ ಭಿತ್ತಿ ಚಿತ್ರಗಳು
ಬಿ.ವಿ.ಕೆ. ಶಾಸ್ತ್ರಿ ರೂ. 10–00

ಕರ್ನಾಟಕದ ಕಲಾವಿದರ ಮಾಲೆ

ಕರ್ನಾಟಕ ಕಲಾವಿದರ ಮಾಲೆಯಲ್ಲಿ ಪ್ರಕಟವಾಗಿರುವ 17 ಪುಸ್ತಕಗಳು ಪ್ರತಿ ಪುಸ್ತಕದ ಬೆಲೆ ರೂ. 6–00

ಕೆ. ವೆಂಕಟಪ್ಪ ಸವಿನೆನಪು
ಎಸ್. ಎನ್. ಚಂದ್ರಶೇಖರ್ ರೂ. 25–00

ಸಮಕಾಲೀನ ಕಲೆ
ಬಿ.ವಿ.ಕೆ. ಶಾಸ್ತ್ರಿ ರೂ. 15–00 ಸಚಿತ್ರ

ಪ್ರಶಸ್ತಿ ಪಡೆದ ಕಲಾವಿದರು (1965–86)
ಸೋಮಶೇಖರ್ ಸಾಲಿ ಮತ್ತು ಪಿ.ಆರ್. ತಿಪ್ಪೇಸ್ವಾಮಿ

ಕಲೆ ಮತ್ತು ರಸಾಸ್ವಾದನೆ ರೂ. 5–00

ಸಮಕಾಲೀನಕಲೆ – 1 ವಿಕೃತ ರೂಪ ರೂ. 10–00

ಸಮಕಾಲೀನಕಲೆ–2 ವಿಶೇಷ ಕಲೋಪನ್ಯಾಸಗಳು ರೂ. 10–0

ತುಳುವರ ಆಚರಣೆಗಳಲ್ಲಿ ಕಲಾವಂತಿಕೆ ರೂ. 25–00

ಎಸ್. ಎನ್. ಸ್ವಾಮಿ

ರೇಖಾಚಿತ್ರಗಳ ಬಗ್ಗೆ ನಾವು ಚಿಂತಿಸುವಾಗಿ ಚಿತ್ರಕಾರ ಎಸ್. ಎನ್. ಸ್ವಾಮಿಯವರ ಕೊಡುಗೆಯ ಬಗ್ಗೆ ಚಿಂತಿಸಬೇಕಾದುದು ಅನಿವಾರ್ಯ. ಈ ಮಾಧ್ಯಮದಲ್ಲಿ ಇಡೀ ವಿಶ್ವದ ಗಮನವನ್ನು ಸೆಳೆದ ಕೆಲವೇ ಕಲಾವಿದರಲ್ಲಿ ಎಸ್. ಎನ್. ಸ್ವಾಮಿ ಗಣ್ಯರು.

ಪ್ರಸ್ತುತ ಪುಸ್ತಕದಲ್ಲಿ ಕಲಾವಿದ ಸ್ವಾಮಿಯವರ ಕಲೆ–ಜೀವನ ಕುರಿತ ಅರ್ಥಪೂರ್ಣ ವಿಶ್ಲೇಷಣೆ ಇದೆ. ಇಲ್ಲಿನ ವಿಚಾರಧಾರೆಯಲ್ಲಿ ಕಲಾವಿದನೊಬ್ಬನ ಅಂತರಂಗ–ಬಹಿರಂಗ ವಿಚಾರಗಳು ಓದುಗರ ಗಮನ ಸೆಳೆಯುತ್ತದೆ.

"ಕಲಾವಿದ ಸ್ವಾಮಿ ಕೇವಲ ಒಬ್ಬ ಚಿತ್ರಕಾರರಾಗಿರಲಿಲ್ಲ. ವಿವಿಧ ಕಲೆಗಳ ಬಗ್ಗೆ ಅವರ ಒಲವು ತೀವ್ರವಾದ ಆಸಕ್ತಿ ವಿಸ್ಮಯಪಡುವಂತಹುದು. ಹೀಗಾಗಿ ಮೈಸೂರಿನ ಈ ಶ್ರೇಷ್ಠ ಚಿತ್ರಕಾರನ ಜೀವನ ಅಧ್ಯಯನಕ್ಕೆ ವಿಶೇಷವಾಗಿ ಅರ್ಹವಾಗಿದೆ.